ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

18 ಸೆಪ್ಟೆಂಬರ್, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -187 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ನವದೆಹಲಿಯಲ್ಲಿ ಅಫ್ಘಾನಿಸ್ತಾನ ವಿರುದ್ಧ ಗುರುವಾರ ನಡೆದ 3ನೇ ಟಿ-20 ಪಂದ್ಯದಲ್ಲಿ 30 ಎಸೆತಗಳಲ್ಲಿ ಶತಕ (108)ಗಳಿಸುವ ಮೂಲಕ ದಾಖಲೆ ಬರೆದ ಭಾರತದ ಅಭಿಷೇಕ ಶರ್ಮಾ... ಭಾರತ 221ಕ್ಕೆ 7....



ಅನಂತ ಗೌರವ » 2


ನಿಸರ್ಗ ಉಳಿದರೆ ಮಾತ್ರ ಮನುಷ್ಯನ ಅಸ್ತಿತ್ವ » 3


ಅವಕಾಶಗಳಿಂದ ವಂಚಿತ : ಯೋಗ್ಯತೆಯಲ್ಲಿ ಕಡಿಮೆ ಇಲ್ಲ » 4


# ಸಬೂಬು ಬೇಕಿಲ್ಲ, ಫಲಿತಾಂಶವೇ ಮುಖ್ಯ

## ಎತ್ತಿನಹೊಳೆ ಯೋಜನೆ ಕಾಮಗಾರಿ ಸ್ಥಗಿತಗೊಳಿಸದಂತೆ ಸಚಿವ ಚಲುವರಾಯಸ್ವಾಮಿ ತಾಕೀತು

• ಪ್ರಜೋದಯ ವರದಿ

**ಹಾಸನ:** ಎತ್ತಿನಹೊಳೆ ಕಾಮಗಾರಿ ಅನುಷ್ಠಾನದಲ್ಲಿ ಸಬೂಬು ಬೇಕಿಲ್ಲ, ಫಲಿತಾಂಶವೇ ಮುಖ್ಯ. ಸಣ್ಣಪುಟ್ಟ ಅಡಚಣೆಗಳಿಗೂ ಕಾಮಗಾರಿ ಸ್ಥಗಿತಗೊಳ್ಳದಂತೆ ಸ್ಥಳದಲ್ಲಿಯೇ ಪರಿಹಾರ ಕಂಡುಕೊಳ್ಳಬೇಕೆಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಅರಸೀಕೆರೆ, ಬೇಲೂರು, ಸಕಲೇಶಪುರ ತಾಲ್ಲೂಕುಗಳಲ್ಲಿ ಗುರುವಾರ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ವಿವಿಧ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಯೋಜನೆಯಡಿ ಲಭ್ಯವಾಗುವ ಒಟ್ಟು 24.01 ಟಿಎಂಸಿ ನೀರನ್ನು ಸಮರ್ಪಕವಾಗಿ ಬಳಸಿಕೊಂಡು ನವೆಂಬರ್ ಅಂತ್ಯದೊಳಗೆ ತುಮಕೂರಿಗೆ ನೀರು ಹರಿಸುವುದು ಹಾಗು ಮುಂದಿನ ಒಂದೂವರೆ ವರ್ಷದೊಳಗೆ ಕೋಲಾರ-



ಚಿಕ್ಕಬಳ್ಳಾಪುರ ಭಾಗಕ್ಕೆ ನೀರು ತಲುಪಿಸುವ ಗುರಿಯನ್ನು ಹೊಂದಲಾಗಿದೆ ಎಂದು ತಿಳಿಸಿದರು.

ಮೊದಲಿಗೆ ಅರಸೀಕೆರೆ ತಾಲ್ಲೂಕಿನ ತಳಲುತೊರೆಯಲ್ಲಿ ನಿರ್ಮಾಣವಾಗುತ್ತಿರುವ ಗುರುತ್ವ ಕಾಲುವೆ ಪ್ಯಾಕೇಜ್-8ರ ಕಾಮಗಾರಿ ವೀಕ್ಷಿಸಿದ ಸಚಿವರು, ಮೈನಿಂಗ್ ಹಾಗು ಲೈನಿಂಗ್ ಕಾಮಗಾರಿಗಳಲ್ಲಿ ವಿಳಂಬವಾಗುತ್ತಿರುವುದಕ್ಕೆ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡ ಅವರು, ಸರ್ಕಾರದ ವತಿಯಿಂದ ಆರ್ಥಿಕ ನೆರವು ಸೇರಿ ಅಗತ್ಯ ಸಹಕಾರ ನೀಡಲಾಗುತ್ತಿರುವಾಗ ಕಾಮಗಾರಿ ವಿಳಂಬ ಮಾಡುವುದನ್ನು ಸಹಿಸಲಾಗದೆಂದರು.

ಕಾಮಗಾರಿಯನ್ನು ಸಮರೋಪಾದಿಯಲ್ಲಿ ಪೂರ್ಣಗೊಳಿಸಿ ಟ್ರಯಲ್ ರನ್‌ಗೆ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಇದೇ ಸಂದರ್ಭದಲ್ಲಿ ಹೇಮಾವತಿ ಲಿಂಕ್ ಮೂಲಕ ಅರಸೀಕೆರೆ ತಾಲ್ಲೂಕಿನ ಕೆರೆಗಳನ್ನು ತುಂಬಿಸುವ ಪ್ರಸ್ತಾವನೆಗೆ ಸಚಿವ ಸಂಪುಟದಲ್ಲಿ ಶೀಘ್ರ ಅನುಮೋದನೆ ದೊರಕಿಸಲು ಪ್ರಯತ್ನಿಸುವುದಾಗಿ ಸ್ಥಳೀಯರಿಗೆ ಭರವಸೆ ನೀಡಿದರು.

**ರೈತರ ಸಮಸ್ಯೆ ಇತ್ಯರ್ಥಕ್ಕೆ ಸೂಚನೆ**

ನಾಯ್ಕನಕೆರೆ ಕಾವಲ್‌ನ ಪ್ಯಾಕೇಜ್-6 ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಮೀನಿನ ಭೂ ಸ್ವಾಧೀನ ಪ್ರಕ್ರಿಯೆಯಿಂದ ಸ್ಥಗಿತ ಗೊಂಡಿದ್ದ ಕಾಮಗಾರಿಯನ್ನು ಸಚಿವರು ಪರಿಶೀಲಿಸಿದರು. ಈ ವೇಳೆ ರೈತರೊಂದಿಗೆ ನೇರವಾಗಿ ಮಾತುಕತೆ ನಡೆಸಿ ಸಮಸ್ಯೆಯ ಕುರಿತು ಮಾಹಿತಿ ಪಡೆದರು.

ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಹೊಸ ಸರ್ಕಾರದ ಆದೇಶ ಹೊರಡಿಸಲಾಗಿದ್ದು, ಎರಡ್ಮೂರು ದಿನಗಳಲ್ಲಿ ಪರಿಹಾರ ವಿತರಿಸುವ ಕ್ರಮ ಕೈಗೊಳ್ಳಲಾಗುವುದು. ಯೋಜನೆ ಸಾರ್ವಜನಿಕ ಹಿತದೃಷ್ಟಿಯಿಂದ ಮುಂದುವರಿಯಬೇಕಿರುವುದರಿಂದ ಸಹಕಾರ ನೀಡುವಂತೆ ಮನವಿ ಮಾಡಿದರು.

» ನಾಲ್ಕನೇ ಪುಟದಲ್ಲಿ

### ಶೀಘ್ರದಲ್ಲೇ ಅರಸೀಕೆರೆಗೆ ನೀರು

ನೂರು ದಿನಗಳಲ್ಲಿ ತುಮಕೂರಿಗೆ ಎತ್ತಿನಹೊಳೆ ನೀರು ಹರಿಸುವ ಗುರಿ ಹೊಂದಲಾಗಿದೆ. ಶೀಘ್ರದಲ್ಲೇ ಅರಸೀಕೆರೆ ತಾಲ್ಲೂಕಿನ ಜನತೆ ನದಿ ನೀರನ್ನು ನೋಡುವ ದಿನಗಳು ಬರಲಿವೆ. ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗುವುದರ ಜತೆಗೆ ಕೆರೆಗಳು ತುಂಬಲಿವೆ ಹಾಗೂ ಅಂತರ್ಜಲ ಮಟ್ಟ ಸುಧಾರಿಸಿ ಕೊಳವೆ ಬಾವಿಗಳಲ್ಲಿಯೂ ನೀರು ದೊರೆಯುವ ನಿರೀಕ್ಷೆ ಇದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಲಿಂಗೇಗೌಡ ಅವರು ಹೇಳಿದರು.

# ತಮಿಳುನಾಡಿಗೆ ಹೇಮಾವತಿ ನೀರು : ರೇವಣ್ಣ ಆಕ್ರೋಶ

## ಶ್ರೀ ರಾಮದೇವರ ಕಟ್ಟೆ ಬಳಿ ಜಲಾಶಯದ ಹೊರಹರಿವು ಪರಿಶೀಲನೆ

• ಪ್ರಜೋದಯ ವರದಿ

**ಹಾಸನ:** ಬರ ಪರಿಸ್ಥಿತಿ ನಡುವೆಯೂ ಹೇಮಾವತಿ ಜಲಾಶಯದಿಂದ ಪ್ರತಿದಿನ ಸುಮಾರು 5 ಸಾವಿರ ಕ್ಯೂಸೆಕ್‌ಗೂ ಅಧಿಕ ಪ್ರಮಾಣದ ನೀರನ್ನು ಕೆಆರ್‌ಎಸ್ ಮೂಲಕ ತಮಿಳುನಾಡಿಗೆ ಹರಿಸಲಾಗುತ್ತಿದೆ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆರೋಪಿಸಿದ್ದಾರೆ.

ಶ್ರೀ ರಾಮದೇವರ ಕಟ್ಟೆ ಬಳಿ ನೀರಿನ ಹರಿವು ಪರಿಶೀಲಿಸಿದ ಅವರು, ಜಲಾಶಯದಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ, ಕಾಲುವೆಗಳಿಗೆ ಬಿಡುಗಡೆಯಾಗುತ್ತಿರುವ ನೀರು ಹಾಗು ಹೊರ ರಾಜ್ಯಕ್ಕೆ ಹರಿಸಲಾಗುತ್ತಿರುವ ನೀರಿನ ಪ್ರಮಾಣದ ಕುರಿತು ಮಾಹಿತಿ ಪಡೆದುಕೊಂಡು, ಜಲಾಶಯದಿಂದ ಹೊರ ಹರಿವು ಹೆಚ್ಚಿಸಿರುವುದಕ್ಕೆ ಆಕ್ರೋಶ ಹೊರ ಹಾಕಿದರು.

ಹೇಮಾವತಿ ಜಲಾಶಯದ ನೀರು ಜಿಲ್ಲೆಯ ಹಲವು ತಾಲ್ಲೂಕುಗಳ ರೈತರ ಪಾಲಿಗೆ ಜೀವನಾಡಿಯಾಗಿದೆ. ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ನೀರು ಸಮರ್ಪಕವಾಗಿ ದೊರೆಯದಿದ್ದರೆ ರೈತರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ 5 ಸಾವಿರ ಕ್ಯೂಸೆಕ್ ನೀರನ್ನು ನಿರಂತರವಾಗಿ ಹೊರಗೆ ಹರಿಸುವುದು ಏಕೆಂದು ಪ್ರಶ್ನಿಸಿದರು.





ನೀರಿನ ಹಂಚಿಕೆ ವಿಚಾರದಲ್ಲಿ ರೈತರ ಹಿತವನ್ನು ಕಡೆಗಣಿಸಬಾರದು. ಜಲಾಶಯದ ನೀರಿನ ಲಭ್ಯತೆ, ಜಿಲ್ಲೆಯ ಅಗತ್ಯ ಹಾಗು ರೈತರ ಪರಿಸ್ಥಿತಿಯನ್ನು ಪರಿಗಣಿಸಿಯೇ ನೀರು ಬಿಡುಗಡೆ ಮಾಡುವ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಇದರ ಪರಿಣಾಮವನ್ನು ರೈತರು ಎದುರಿಸಬೇಕಾಗುತ್ತದೆ. ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನೀರಿನ ಬಳಕೆ ಹಾಗು ಹಂಚಿಕೆ ಕುರಿತು ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಹೇಮಾವತಿ ಜಲಾಶಯದ ನೀರು ಜಿಲ್ಲೆಯ ರೈತರ ಕೃಷಿ ಚಟುವಟಿಕೆಗಳಿಗೆ ಪ್ರಮುಖ ಆಧಾರವಾಗಿದ್ದು, ಇಂತಹ ಸಂದರ್ಭದಲ್ಲಿ ನೀರನ್ನು ಹೊರ ರಾಜ್ಯಕ್ಕೆ ಹರಿಸಲಾಗುತ್ತಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ಈಗಾಗಲೇ ಮಳೆ ಕೊರತೆ, ಬೆಳೆಗಳ ಸ್ಥಿತಿ ಹಾಗು ನೀರಿನ ಲಭ್ಯತೆ ಕುರಿತು ರೈತರು ಚಿಂತಿತರಾಗಿರುವ ಸಂದರ್ಭದಲ್ಲೇ ಜಲಾಶಯದ ನೀರನ್ನು ಹೊರಕ್ಕೆ ಹರಿಸುತ್ತಿರುವ ಕ್ರಮ ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಕೌಶಲ್ಯಕ್ಕೆ ಮೌಲ್ಯ ನೀಡುವುದು ವಿಶ್ವಕರ್ಮರ ಪರಂಪರೆ

• ಪ್ರಜೋದಯ ವರದಿ

**ಹಾಸನ :** ವಿಶ್ವಕರ್ಮರ ಪರಂಪರೆ ಶ್ರಮಕ್ಕೆ ಗೌರವ, ಕೌಶಲ್ಯಕ್ಕೆ ಮೌಲ್ಯ ಮತ್ತು ಸೃಜನಶೀಲತೆಗೆ ಪ್ರೋತ್ಸಾಹ ನೀಡುತ್ತದೆ, ತಮ್ಮ ಕಲೆ ಮತ್ತು ಜ್ಞಾನದಿಂದ ಅನೇಕ ಪ್ರಸಿದ್ಧವಾದ ಕಟ್ಟಡಗಳನ್ನು ನಿರ್ಮಿಸಿದವರು ವಿಶ್ವಕರ್ಮರೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶ ಗೌಡ ಅವರು ತಿಳಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಕರ್ಮದ ಮೂಲಕ ವಿಶ್ವವನ್ನು ಸೃಷ್ಟಿಸಿದ ವರು ವಿಶ್ವಕರ್ಮರು. ವಿಶ್ವ ರಾಶಿಯಲ್ಲಿ ಒಂದು ಜೀವ ಇಲ್ಲದಿದ್ದರೂ ವಿಶ್ವವೂ ಹಾನಿಯಾಗುತ್ತದೆ. ಮನುಷ್ಯನ ಸಾಮಾನ್ಯ ಆಯಾಮಗಳಲ್ಲಿ ಒಂದನ್ನು ಹೊರತು ಪಡಿಸಿದರೂ ವಿಶ್ವ ಸಂಪೂರ್ಣವಾಗಿ ಸೃಷ್ಟಿಯಾಗುವುದಿಲ್ಲ ಎಂದು ಹೇಳಿದರು.

ಭಗವಾನ್ ವಿಶ್ವಕರ್ಮರು ವಿಶ್ವದ ಪ್ರಥಮ ವಾಸ್ತುಶಿಲ್ಪಿಗಳ ಸೃಷ್ಟಿಕರ್ತರು, ಪ್ರಾಣಿ, ಪಕ್ಷಿಗಳು ಇತರೆ ಜೀವ



ಸಂಕುಲಗಳು ಪ್ರಕೃತಿಯ ನಿಯಮಾನುಸಾರವಾಗಿ ಜೀವಿಸುತ್ತವೆ, ಆದರೆ ಮನುಷ್ಯರು ಮಾತ್ರ ಪ್ರಕೃತಿ ವಿರುದ್ಧವಾಗಿ ಜೀವಿಸುತ್ತಾನೆ. ಯಾವುದೇ ಕೆಲಸವನ್ನು ಪ್ರಾಮಾಣಿಕವಾಗಿ ಮತ್ತು ಶ್ರದ್ಧೆಯಿಂದ ಮಾಡಿದರೆ ಅದಕ್ಕೆ ಗೌರವ ಸಿಗುತ್ತದೆ ಎಂಬ ಸಂದೇಶವನ್ನು ವಿಶ್ವಕರ್ಮ ಪೂಜೆಯಿಂದ ತಿಳಿಯಬಹುದಾಗಿದೆ ಎಂದು ಹೇಳಿದರು.

ವಿಶ್ವಕರ್ಮರ ಐದು ಕಸುಬುಗಳು ಕೇವಲ ವೃತ್ತಿಗಳಲ್ಲ, ಇವು ಜಗತ್ತಿನ ನಾಗರಿಕತೆಯ ಮತ್ತು ಅಭಿವೃದ್ಧಿಯ ಮೂಲ ಅಡಿಪಾಯಗಳಾಗಿವೆ, ನಮ್ಮ ಕಲಿಕೆ, ನಮ್ಮ ಗ್ರಹಿಕೆ ಸಮಸ್ಥಿತಿಯಲ್ಲಿ ಇಡಬೇಕೆ ವಿನಹ ವಿರುದ್ಧ ಸ್ಥಿತಿಗೆ ತಂದು ಇಡಬಾರದು. ವಾಸ್ತುಶಿಲ್ಪಗಳಿಗೂ ಸಹ ಕಲೆಯ ಮೂಲಕ ಜೀವ ನೀಡುವ ಶಕ್ತಿಯನ್ನು ಹೊಂದಿರುವವರು, ಎಲ್ಲಾ ನಿರ್ಜೀವ ವಸ್ತುಗಳಿಗೂ ಜೀವದ ರೂಪ ನೀಡುತ್ತಾರೆ ಹಾಗಾಗಿ ವಿಶ್ವಕರ್ಮ ಅವರನ್ನು ಬ್ರಹ್ಮ ಎಂದು ಕರೆಯುತ್ತಾರೆಂದರು.

ಮನುಷ್ಯರನ್ನು ತಂತ್ರಜ್ಞಾನದ ಮೂಲಕ ಕಾಯಕ ಹೀನ ಮಾಡಿದರೆ ಪುನಃ ಕಾಯಕಸಕ್ತಾರನಾಗಿ ಮಾಡುವುದು ತುಂಬಾ ಕಷ್ಟವಾಗುತ್ತದೆ,.

» ನಾಲ್ಕನೇ ಪುಟದಲ್ಲಿ

# ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ, ತಡೆದವರು ಯಾರು?

## ಹೆಚ್.ಡಿ.ಕುಮಾರಸ್ವಾಮಿಗೆ ಸಚಿವ ಚಲುವರಾಯಸ್ವಾಮಿ ಟಾಂಗ್

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಬಳಿ ದೇಶವನ್ನೇ ಅಲುಗಾಡಿಸುವಂತಹ ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ. ಬೇಡವೆಂದು ನಾವು ಎಲ್ಲಾದರೂ ಹೇಳಿದ್ದೇವೆಯೇ. ಸರ್ಕಾರದಿಂದ ತಡೆ ತಂದಿದ್ದೇವೆಯೇ ಎಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅವರು ಪ್ರಶ್ನಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಬ್ಬ ಮಾಜಿ ಮುಖ್ಯಮಂತ್ರಿ, ಪ್ರಧಾನಿ ಮಗನಾಗಿರುವ ವ್ಯಕ್ತಿಯ ಬಳಿ ದೇಶವನ್ನೇ ಅಲುಗಾಡಿಸುವಂತಹ ದಾಖಲೆ ಇದ್ದರೆ, ಅಮೇರಿಕಾ ಪ್ರವಾಸವನ್ನು ರದ್ದುಪಡಿಸಿ ಇಲ್ಲಿಯೇ ಉಳಿದು ದಾಖಲೆಗಳನ್ನು ಬಿಡುಗಡೆ ಮಾಡುತ್ತಿದ್ದರು. ಏಕೆ ಅಮೇರಿಕಾಕ್ಕೆ ಹೋದರು, ಏಕೆ ಈ ರೀತಿ ಹೇಳಿಕೆ ನೀಡಿದ್ದಾರೆಂಬುದನ್ನು ಅವರ ಹಿಂದಿನ ಇತಿಹಾಸ ನೋಡಿದರೆ ತಿಳಿಯುತ್ತದೆ ಎಂದು ಹೇಳಿದರು.

ಯಾರಾದರೂ ದಾಖಲೆ ಬಿಡುಗಡೆ ಮಾಡದಂತೆ ತಡೆ ನೀಡಿದ್ದಾರೆಂಬುದಕ್ಕೆ



ಸಾಕ್ಷ್ಯವಿದೆಯೇ. ಪೆನ್‌ಡ್ರೈವ್ ಸೇರಿ ಹಲವು ವಿಚಾರಗಳ ಬಗ್ಗೆ 2023ರಿಂದ ಹೇಳಿಕೆಗಳು ಬರುತ್ತಿವೆ. ಎಷ್ಟು ಯಶಸ್ವಿಯಾಗಿವೆ ಎಂಬುದು ನನಗೆ ಗೊತ್ತಿಲ್ಲ. ದೇಶವೇ ಅಲ್ಲೋಲ ಕಲ್ಲೋಲವಾಗುತ್ತದೆ, ಸರ್ಕಾರವೇ ಅಲುಗಾಡುತ್ತದೆ ಎನ್ನುವಂತಹ ದಾಖಲೆ ತಮ್ಮ ಬಳಿ ಇದ್ದರೆ, ಅದನ್ನು ಬಿಡುಗಡೆ ಮಾಡುವುದನ್ನು ಬಿಟ್ಟು ವಿದೇಶಕ್ಕೆ ಹೋಗುತ್ತಿದ್ದರೇ ಎಂದು ಪ್ರಶ್ನಿಸಿದರು.

ಮಾಧ್ಯಮದವರು ಯಾರ ಪರವಾಗಿಯೂ ಇರಬೇಕೆಂದು ನಾನು ಹೇಳುವುದಿಲ್ಲ. ಕುಮಾರಸ್ವಾಮಿ ಅವರ ಬಗ್ಗೆ ಅಷ್ಟೊಂದು ಪ್ರೀತಿ ಏಕೆ, ನಮ್ಮ ಬಗ್ಗೆಯೂ ಸ್ವಲ್ಪ ಪ್ರೀತಿ ಇಟ್ಟುಕೊಳ್ಳಿ. ನಾನು ಅಥವಾ ಸಚಿವ ಕೆ.ಎಂ.ಶಿವಲಿಂಗೇಗೌಡ ಇದೇ ರೀತಿ ಹೇಳಿಕೆ ನೀಡಿದ್ದರೆ, ಇದೇ ಪ್ರಶ್ನೆಯನ್ನು ಪದೇ ಪದೇ ಕೇಳುತ್ತಿದ್ದೀರಾ. ಒಂದು ದಿನ ಕೇಳಿ ಅಲ್ಲಿಗೆ ಬಿಟ್ಟುಬಿಡುತ್ತಿದ್ದಿರಿ. ಆದರೆ, 2023ರಿಂದಲೂ ಇದೇ ವಿಚಾರವನ್ನು ಮತ್ತೆ ಮತ್ತೆ ಕೇಳಲಾಗುತ್ತಿದೆ. ನಾನು ಒಳ್ಳೆಯ ಕೆಲಸಕ್ಕಾಗಿ ಇಲ್ಲಿಗೆ ಬಂದಿದ್ದೇನೆ. ಇದು ಬಹಳ ಮುಖ್ಯವಾದ ಕಾರ್ಯಕ್ರಮ. ಅದನ್ನು ಬಿಟ್ಟು ಬೇರೆ ವಿಷಯ ಕೇಳಬೇಡಿ ಎಂದರು.

**ಮಂಗಳೂರಿನಲ್ಲಿ ಜನರ ಸಮಸ್ಯೆಗೆ ಆದ್ಯತೆ**

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗಲೇ ಜನರ ಬಳಿಗೆ ತೆರಳಿ ಸರ್ಕಾರದ ಕಾರ್ಯಕ್ರಮಗಳನ್ನು ನಡೆಸುವ ಪ್ರಕ್ರಿಯೆ ಆರಂಭಿಸಿದ್ದೇವೆ. ಚಾಮರಾಜನಗರ, ಕಲಬುರಗಿ ಹಾಗು ಚಿತ್ರದುರ್ಗದಲ್ಲಿ ಕಾರ್ಯಕ್ರಮ ನಡೆಸಿದ್ದೇವೆ. ನಂತರ ಮಂಗಳೂರಿನಲ್ಲಿ ನಡೆಸಬೇಕಿತ್ತು. ಅಷ್ಟರಲ್ಲಿ ಸರ್ಕಾರ ಬದಲಾವಣೆಯಾಯಿತು. ಇದೀಗ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಾಯಕತ್ವದಲ್ಲಿ ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಸುತ್ತಿದ್ದೇವೆಂದು ತಿಳಿಸಿದರು.

ಮಂಗಳೂರಿನ ಜನರ ಸಮಸ್ಯೆಗಳು ಹಾಗು ಅಭಿವೃದ್ಧಿ ವಿಚಾರಗಳಿಗೆ ಹೆಚ್ಚಿನ ಗಮನ ನೀಡಲಾಗುವುದು. ಯಾವುದೇ ಪಕ್ಷ ಅಥವಾ ಸರ್ಕಾರ ಕೈಗೊಳ್ಳುವ ಕಾರ್ಯಗಳು ಜನರಿಗೆ ಒಳ್ಳೆಯದಾಗಬೇಕು. ನಾವು ಜನರಿಗೆ ಕೆಲಸ ಮಾಡಿ, ಸೂಕ್ತ ಸಮಯದಲ್ಲಿ ಅವರ ಆಶೀರ್ವಾದವನ್ನು ನಿರೀಕ್ಷಿಸುವುದು ಸಹಜ ಎಂದರು.

**ರಾಜಕಾರಣಕ್ಕೆ ಅವಕಾಶವಿಲ್ಲ**

ಟಿ.ನರಸೀಪುರದಲ್ಲಿ ಗಣಪತಿ ಶೋಭಾಯಾತ್ರೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಗಣಪತಿ ಪೂಜೆ ಮಾಡುವುದು ಭಕ್ತಿಯ ವಿಚಾರ. ಅದರ ಮೂಲಕ ರಾಜಕಾರಣ ಮಾಡಲು ನಾವು ತಯಾರಿಲ್ಲ. ಗಣಪತಿ ಶಿವನಿಗೆ ಅತ್ಯಂತ ಪ್ರೀತಿಯ ಗೌರಿಯ ಪುತ್ರ. ದೇವರ ವಿಚಾರವನ್ನು ರಾಜಕಾರಣಕ್ಕೆ ಬಳಸಿಕೊಂಡವರ ಹಣೆಬರಹ ಏನಾಗುತ್ತದೆ ಎಂಬುದನ್ನು ಮುಂದೆ ನೋಡೋಣ ಎಂದು ಹೇಳಿದರು.

### ಕುಮಾರಸ್ವಾಮಿ ಹೇಳಿಕೆಗಳೆಲ್ಲಾ ಪೊಳ್ಳಾಗಿವೆ

ಕುಮಾರಸ್ವಾಮಿ ಅವರ ಹೇಳಿದ ಸಂಗತಿಗಳೆಲ್ಲವೂ ಈವರೆಗೆ ಪೊಳ್ಳಾಗಿವೆ. ಈ ವಿಚಾರವನ್ನು ಪದೇ ಪದೇ ಪುನರಾವರ್ತಿಸಬೇಡಿ. ಇಲ್ಲಿಗೆ ಬಿಟ್ಟು ಬಿಡಿ. ಅವರು ದಾಖಲೆ ಬಿಡುಗಡೆ ಮಾಡುತ್ತೇನೆಂದಿದ್ದರೆ ಮಾಡಲಿ. ಅದನ್ನು ನಾವು ಸ್ವಾಗತಿಸಿದ್ದೇವೆ. ನಮ್ಮ ಬಹಳಷ್ಟು ಸಚಿವರು ಹಾಗು ಮುಖ್ಯಮಂತ್ರಿ ಕೂಡ ಸ್ವಾಗತಿಸಿದ್ದಾರೆಂದು ಸಚಿವ ಚಲುವರಾಯಸ್ವಾಮಿ ಅವರು ಹೇಳಿದರು.

# ಹೇಮಾವತಿ ಭೂ ಸಂತ್ರಸ್ತರ ಪೋಡಿ ಪ್ರಕ್ರಿಯೆ ಸ್ಥಗಿತ

## ಪ್ರಾರಂಭಿಸಲು ಕ್ರಮ ಕೈಗೊಳ್ಳದಿದ್ದರೆ ಹೋರಾಟ: ಆರ್.ಪಿ.ವೆಂಕಟೇಶಮೂರ್ತಿ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ಹೇಮಾವತಿ ಜಲಾಶಯ ನಿರ್ಮಾಣದಿಂದ ಸಂತ್ರಸ್ತರಾದ ರೈತ ಕುಟುಂಬಗಳಿಗೆ ಆಗಿನ ಸರ್ಕಾರ 1972ರಲ್ಲಿ ಜಮೀನು ಮಂಜೂರು ಮಾಡಿ, ಪಹಣಿ ನೀಡಿ ಪೋಡಿ ಶುಲ್ಕವನ್ನು ಪಾವತಿಸಿಕೊಂಡಿದೆ. ಆದರೆ, 54 ವರ್ಷ ಕಳೆದರೂ ಇನ್ನೂ ಸಮರ್ಪಕ ಪೋಡಿ ಮಾಡಿಕೊಟ್ಟಿಲ್ಲವೆಂದು ಸಂತ್ರಸ್ತರ ಹೋರಾಟ ಸಮಿತಿ ಗೌರವಾಧ್ಯಕ್ಷ ಆರ್.ಪಿ. ವೆಂಕಟೇಶಮೂರ್ತಿ ಅವರು ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಧಿಕಾರಿ ಕೆ.ಎಸ್ ಲತಾಕುಮಾರಿ ಅವರು ಜಿಲ್ಲೆಗೆ ಬಂದ ಹೊಸದರಲ್ಲಿ ಸಂತ್ರಸ್ತರ ಸಮಸ್ಯೆಗಳಿಗೆ ಆದ್ಯತೆ ನೀಡಿ ಪೋಡಿ





ನೀಡುವ ಪ್ರಕ್ರಿಯೆ ಆರಂಭಿಸಿದ್ದರು. ಆದರೆ, ಎಸ್‌ಎಲ್‌ಒ ಅವರು ಸಂತ್ರಸ್ತರಿಗೆ ಸಂಬಂಧಿಸಿದ ದಾಖಲೆ ನೈಜತೆಯಿಂದ ಕೂಡಿಲ್ಲವೆಂದು ವರದಿ ನೀಡಿದರೆಂಬ ಕಾರಣಕ್ಕೆ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ತಿಳಿಸಿದರು.

ಸುಮಾರು 40 ಹಳ್ಳಿಗಳ ಸಂತ್ರಸ್ತ ರೈತರಿಗೆ ಸಾಗುವಳಿ ಚೀಟಿ ಹಾಗು ಪಹಣಿ ನೀಡಿದ ಬಳಿಕ ಸಂತ್ರಸ್ತರ ವಶಕ್ಕೆ ಜಮೀನು ನೀಡಿದೆ. ಆದರೀಗ ದಾಖಲೆಗಳು ನೈಜತೆಯಿಂದ ಕೂಡಿಲ್ಲವೆಂದು ಅಧಿಕಾರಿ ವರದಿ ಮಾಡುವುದು ಸಮಸ್ಯೆ ಪರಿಹಾರ ಬದಲು ಕಗ್ಗಂಟಾಗಿಸಿದೆ. 54 ವರ್ಷಗಳಿಂದ ಹಕ್ಕುಪತ್ರ ದಾಖಲೆ ಕೊಡದ ಸರ್ಕಾರಕ್ಕೆ ನಾಚಿಕೆ ಆಗಬೇಕು. ಅಧಿಕಾರಿಗಳು ಈ ವಿಚಾರದಲ್ಲಿ ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂದರು.

ಸಂತ್ರಸ್ತರ ವಿಚಾರದಲ್ಲಿ ಅನುಮಾನ ವ್ಯಕ್ತಪಡಿಸುತ್ತಿರುವವರು, ನೈಜ ಸಂತ್ರಸ್ತರಲ್ಲದವರನ್ನು ಹೊರಹಾಕಿ, ಹೇಮಾವತಿ ಜಲಾಶಯ ಯೋಜನೆಯಿಂದ ಸಂತ್ರಸ್ತರಾದ ಜಿಲ್ಲೆಯ 8,273 ರೈತ ಕುಟುಂಬಗಳಿಗೆ ಸಂಬಂಧಿಸಿದ ಜಮೀನುಗಳ ಪೋಡಿ ಹಾಗು ಸಾಗುವಳಿ ಚೀಟಿ ಸಮಸ್ಯೆಯನ್ನು ಶೀಘ್ರ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಈವರೆಗೆ ಕೇವಲ ಶೇ.10 ರಷ್ಟು ರೈತರಿಗೆ ಪೋಡಿ ನೀಡಲಾಗಿದೆ. ಉಳಿದವರಿಗೂ ಪೋಡಿ ನೀಡಲು ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ನಾವು ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿದ ಅವರು,

» ನಾಲ್ಕನೇ ಪುಟದಲ್ಲಿ

# ಮೋದಿ ಹುಟ್ಟುಹಬ್ಬ: ಯೂತ್ ಕಾಂಗ್ರೆಸ್ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಯೂತ್ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ನಗರದಲ್ಲಿ ಕಪ್ಪುಪಟ್ಟಿ ಧರಿಸಿ ಅಣಕು ಪ್ರತಿಭಟನೆ ನಡೆಸಿದರು.

ಪದವೀಧರರ ವೇಷ ಧರಿಸಿದ್ದ ಪ್ರತಿಭಟನಾಕಾರರು ರಸ್ತೆ ಬದಿಯಲ್ಲಿ ಬಜ್ಜಿ ಬೇಯಿಸುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು. ಉದ್ಯೋಗಕ್ಕಾಗಿ ಶಿಕ್ಷಣ ಪಡೆದುಕೊಂಡ ಯುವಕರು ಉದ್ಯೋಗ ದೊರೆಯದೆ ಸ್ವಯಂ ಉದ್ಯೋಗದತ್ತ ಮುಖ ಮಾಡುವ ಪರಿಸ್ಥಿತಿಯನ್ನು ಅಣಕು ಪ್ರದರ್ಶನದ ಮೂಲಕ ಬಿಂಬಿಸಿದರು. ಯುವಕರಿಗೆ ಉದ್ಯೋಗ

» ನಾಲ್ಕನೇ ಪುಟದಲ್ಲಿ

# ಬರಪೀಡಿತ ಪಟ್ಟಿಗೆ ಬೇಲೂರು-ಆಲೂರು ಸೇರ್ಪಡೆ

## ಸಕಲೇಶಪುರ ಹೊರತುಪಡಿಸಿ ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಬರ ಘೋಷಣೆ

• ಪ್ರಜೋದಯ ವರದಿ

**ಹಾಸನ:** ಮುಂಗಾರು ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳು ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಹಿನ್ನಲೆ ರಾಜ್ಯ ಸರ್ಕಾರ ಎರಡನೇ ಹಂತದಲ್ಲಿ 23 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದ್ದು, ಜಿಲ್ಲೆಯ ಬೇಲೂರು-ಆಲೂರು ತಾಲ್ಲೂಕುಗಳು ಪಟ್ಟಿಗೆ ಸೇರ್ಪಡೆಯಾಗಿವೆ.

ಜಿಲ್ಲೆಯ ಎಂಟು ತಾಲ್ಲೂಕುಗಳ ಪೈಕಿ ಸಕಲೇಶಪುರ ಹೊರತುಪಡಿಸಿ ಹಾಸನ, ಚನ್ನರಾಯಪಟ್ಟಣ, ಅರಸೀಕೆರೆ, ಅರಕಲಗೂಡು, ಹೊಳೆನರಸೀಪುರ, ಬೇಲೂರು ಹಾಗು ಆಲೂರು ತಾಲ್ಲೂಕನ್ನು ಬರಪೀಡಿತ ಪಟ್ಟಿಗೆ ಸೇರಿದಂತಾಗಿವೆ.

ಆ. 27ರಂದು ಹೊರಡಿಸಿದ್ದ ಮೊದಲ ಹಂತದ ಅಧಿಸೂಚನೆಯಲ್ಲಿ ಬೇಲೂರು ಮತ್ತು ಆಲೂರು ತಾಲ್ಲೂಕುಗಳನ್ನು ಮೊದಲ ಪಟ್ಟಿಯಿಂದ ಕೈಬಿಡಲಾಗಿತ್ತು. ಇದರಿಂದ ಸ್ಥಳೀಯ ಜನಪ್ರತಿನಿಧಿಗಳು, ರೈತ ಸಂಘಟನೆಗಳಿಂದ ಅಸಮಾಧಾನ ವ್ಯಕ್ತವಾಗಿತ್ತು. ಎರಡೂ ತಾಲ್ಲೂಕುಗಳಲ್ಲಿನ ವಾಸ್ತವ ಬರ ಪರಿಸ್ಥಿತಿಯನ್ನು ಪರಿಗಣಿಸಿ ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡಬೇಕೆಂಬ ಒತ್ತಾಯ ಕೇಳಿಬಂದಿತ್ತು. ಬೇಲೂರು ತಾಲ್ಲೂಕಿನಲ್ಲಿ ಗುರುವಾರ ಬಂದ್ ನಡೆಸಿ ಸರ್ಕಾರದ ಗಮನ ಸೆಳೆಯಲಾಗಿತ್ತು. ಈ ಬೆಳವಣಿಗೆಗಳ ಬೆನ್ನಲ್ಲೇ ಗುರುವಾರ ಸರ್ಕಾರ ಪ್ರಕಟಿಸಿರುವ ಎರಡನೇ ಹಂತದ ಪಟ್ಟಿಯಲ್ಲಿ ಬೇಲೂರು ಮತ್ತು ಆಲೂರು ತಾಲೂಕುಗಳು ಸ್ಥಾನ ಪಡೆದಿವೆ.

ಬೇಲೂರು ಮತ್ತು ಆಲೂರು ತಾಲ್ಲೂಕುಗಳನ್ನು ಮೊದಲ ಹಂತದಲ್ಲೇ ಬರಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆ ಇದ್ದರೂ, ವೈಜ್ಞಾನಿಕ ಅಧ್ಯಯನ ಹಾಗು ಸ್ಥಳ ಪರಿಶೀಲನೆಯ ವರದಿಗಳ ಆಧಾರದ ಮೇಲೆ ಎರಡನೇ ಹಂತದಲ್ಲಿ ಸೇರ್ಪಡೆ ಮಾಡಲಾಗಿದೆ. ಸರ್ಕಾರದ ನೆರವು ತಳಮಟ್ಟದ ರೈತರಿಗೆ ತಲುಪಿಸುವುದು ಮುಂದಿನ ಸವಾಲಾಗಿದೆ.

ಬರಪೀಡಿತ ಪಟ್ಟಿಗೆ ಸೇರ್ಪಡೆಯಾಗಿರುವ ಹಿನ್ನಲೆ ರೈತರು ಸರ್ಕಾರದಿಂದ ಪರಿಹಾರ ಹಾಗು ಅಗತ್ಯ ನೆರವಿನ ನಿರೀಕ್ಷೆಯಲ್ಲಿದ್ದಾರೆ. ಬೆಳೆ ನಷ್ಟಕ್ಕೆ ಪರಿಹಾರ, ಕುಡಿಯುವ ನೀರಿನ ವ್ಯವಸ್ಥೆ, ಜಾನುವಾರುಗಳಿಗೆ ಮೇವು ಮತ್ತು ನೀರಿನ ಸೌಲಭ್ಯ ಸೇರಿ ಬರ ನಿರ್ವಹಣೆಗೆ ಸಂಬಂಧಿಸಿದ ಕ್ರಮಗಳು ತ್ವರಿತವಾಗಿ ಜಾರಿಯಾಗಬೇಕೆಂಬುದು ರೈತರ ನಿರೀಕ್ಷೆಯಾಗಿದೆ.

# ಸೇವಾ ಸಂಕಲ್ಪ ಅಭಿಯಾನ : ಸೆ.17ರಿಂದ ಅ.17ರವೆಗೆ 13 ವಿವಿಧ ಕಾರ್ಯಕ್ರಮ





• ಪ್ರಜೋದಯ ವರದಿ

**ಹಾಸನ:** ಪ್ರಧಾನಿ ನರೇಂದ್ರ ಮೋದಿ ಅವರ 25 ವರ್ಷಗಳ ಸುದೀರ್ಘ ಆಡಳಿತ ಪಯಣ, ಸಾರ್ವಜನಿಕ ಸೇವೆಯ ಸ್ಮರಣಾರ್ಥ 13 ಕಾರ್ಯಕ್ರಮಗಳ ಅಭಿಯಾನವನ್ನು ಸೆ.17 ರಿಂದ ಅಕ್ಟೋಬರ್ 17ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿದ್ದೇಶ್‌ನಾಗೇಂದ್ರ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರುವಾರ ಸಂಜೆ ನಗರದ ಸಿದ್ದೇಶ್ವರಸ್ವಾಮಿ ದೇವಾಲಯ ಆವರಣದಲ್ಲಿ ಆಶೀರ್ವಾದ ದೀಪ ಹಮ್ಮಿಕೊಳ್ಳಲಾಗಿದೆ. ಪ್ರತಿ ಬೂತ್‌ನಲ್ಲಿ ಪ್ರತಿಯೊಂದು ಕುಟುಂಬವೂ ದೀಪ ಬೆಳಗಿಸುವ ಮೂಲಕ ಈ ಸಂಕಲ್ಪದಲ್ಲಿ ಭಾಗವಹಿಸಲಿದ್ದಾರೆ. ಪ್ರತಿ ದೀಪವೂ ನರೇಂದ್ರ ಮೋದಿ ಅವರ 25 ವರ್ಷಗಳ ಜನಸೇವೆಗೆ ಕೃತಜ್ಞತೆಯ ಸಂಕೇತ ಎಂದರು.

ಇದೇ ರೀತಿ 25 ಕೋಟಿ ಮಕ್ಕಳ ಕನಸಿನ ಭಾರತ ಅಂಗವಾಗಿ ರಾಷ್ಟ್ರವ್ಯಾಪಿ ಚಿತ್ರಕಲೆ, ಭಾಷಣಸ್ಪರ್ಧೆ, ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಮೋದಿ ಅವರ ಸೇವಾ ಕಾರ್ಯ ಹಾಗೂ ವಿಕಸಿತ ಭಾರತ-2047 ರ ದೃಷ್ಟಿಕೋನ ಕುರಿತು ಮಾಹಿತಿ ನೀಡಲಾಗುವುದು. ಈ ವಿಷಯಗಳ

» ನಾಲ್ಕನೇ ಪುಟದಲ್ಲಿ

## ರೈತರು, ವಿವಿಧ ಸಂಘಟನೆಗಳಿಂದ ಪ್ರತಿಭಟನೆ | ಸೋಮಶೇಖರ ಸ್ವಾಮೀಜಿ ಬೆಂಬಲ

# ಬರಪಟ್ಟಿಗೆ ಸೇರಿಸಲು ಆಗ್ರಹ: ಬೇಲೂರು ಬಂದ್ ಯಶಸ್ವಿ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಆಗ್ರಹಿಸಿ ರೈತ ಸಂಘ ಹಾಗು ವಿವಿಧ ಪ್ರಗತಿಪರ ಸಂಘಟನೆಗಳು ಕರೆ ನೀಡಿದ್ದ ಬೇಲೂರು ಬಂದ್ ಗುರುವಾರ ಯಶಸ್ವಿಯಾಯಿತು. ಅಂಗಡಿಮುಂಗಟ್ಟುಗಳು ಬಂದ್ ಆಗಿದ್ದು, ಪ್ರಮುಖ ರಸ್ತೆಗಳು ಹಾಗು ಮಾರುಕಟ್ಟೆ ಪ್ರದೇಶಗಳು ಜನ ಸಂಚಾರವಿಲ್ಲದೆ ಬಿಕೋ ಎನ್ನುತ್ತಿದ್ದವು.

ತಾಲ್ಲೂಕಿನ ವಿವಿಧ ಹೋಬಳಿಗಳಿಂದ ಸಾವಿರಾರು ಸಂಖ್ಯೆಯಲ್ಲಿ ರೈತರು, ಸಾರ್ವಜನಿಕರು, ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಪಟ್ಟಣಕ್ಕೆ ಆಗಮಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಬೆಳಿಗ್ಗೆಯಿಂದಲೇ ವರ್ತಕರು ಸ್ವಯಂಪ್ರೇರಿತವಾಗಿ ಅಂಗಡಿಮುಂಗಟುಗಳನ್ನು ಮುಚ್ಚಿ ಬಂದ್‌ಗೆ ಬೆಂಬಲ ಸೂಚಿಸಿದರು. ಸರ್ಕಾರಿ ಹಾಗು ಖಾಸಗಿ ಶಾಲಾ-ಕಾಲೇಜುಗಳಿಗೂ ರಜೆ ಘೋಷಿಸಲಾಗಿತ್ತು.

» ನಾಲ್ಕನೇ ಪುಟದಲ್ಲಿ



### ಬಿಗಿ ಪೊಲೀಸ್ ಬಂದೋಬಸ್ತ್

ಬಂದ್ ಹಿನ್ನೆಲೆಯಲ್ಲಿ ಅಹಿತಕರ ಘಟನೆ ನಡೆಯದಂತೆ ಸಿಪಿಐ ರೇವಣ್ಣ ನೇತೃತ್ವದಲ್ಲಿ ಪಟ್ಟಣ ಹಾಗು ಪ್ರಮುಖ ಸ್ಥಳಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಪ್ರಮುಖ ಸ್ಥಳಗಳಲ್ಲಿ ನಿಯೋಜನೆಗೊಂಡಿದ್ದರು.

### ಸಚಿವರಿಗೆ ಸ್ವಾಮೀಜಿ ಮನವರಿಕೆ

ತಾಲ್ಲೂಕನ್ನು ಬರಪೀಡಿತ ಪ್ರದೇಶಗಳ ಪಟ್ಟಿಯಿಂದ ಕೈಬಿಡಲಾಗಿದ್ದು, ತಕ್ಷಣವೇ ಬರಪಟ್ಟಿಗೆ ಸೇರಿಸಬೇಕು ಎಂದು ಪುಷ್ಪಗಿರಿ ಮಠದ ಪೀಠಾಧ್ಯಕ್ಷ ಶ್ರೀ ಸೋಮಶೇಖರ ಸ್ವಾಮೀಜಿ ಅವರು ಕೃಷಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ದೂರವಾಣಿ ಮೂಲಕ ಮನವಿ ಮಾಡಿದರು. ಪ್ರತಿಕ್ರಿಯಿಸಿದ ಸಚಿವ ಪಿ.ಎಂ.ನರೇಂದ್ರಸ್ವಾಮಿ ಅವರು, ಈ ಕುರಿತು ಈಗಾಗಲೇ ಪರಿಶೀಲನೆ ನಡೆಸಲು ಸೂಚಿಸಿರುವುದಾಗಿ ತಿಳಿಸಿದರು.



# ಸದನ ಸಮಿತಿ ವರದಿ ಜಾರಿಗೆ ಖಾಸಗಿ ಶಾಲೆಗಳ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಅನುದಾನರಹಿತ ಖಾಸಗಿ ಶಾಲೆಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ರಚಿಸಿರುವ ವಿಶೇಷ ಸದನ ಸಮಿತಿ ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ವರದಿಯನ್ನು ಶಿಕ್ಷಣ ಇಲಾಖೆ ಕೂಡಲೇ ಜಾರಿಗೊಳಿಸಬೇಕೆಂದು ಜಿಲ್ಲಾ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಿ.ಇ.ಶಿವರಾಮೇಗೌಡ ಅವರು ಒತ್ತಾಯಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರದಿಯಲ್ಲಿ ಪ್ರಸ್ತಾಪ ಮಾಡಿರುವ ಎಲ್ಲಾ ವಿಷಯಗಳನ್ನು ಪರಿಶೀಲಿಸಿ ತಕ್ಷಣ ಜಾರಿಗೊಳಿಸಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು, ಶಿಕ್ಷಣ

» ನಾಲ್ಕನೇ ಪುಟದಲ್ಲಿ

CMYK CMYK CMYK CMYK

E-mail : prajodayahsn@gmail.com

ಪ್ರಜೋದಯ

18 ಸೆಪ್ಟೆಂಬರ್ 2026 ಶುಕ್ರವಾರ

# ಸಿನಿ ಪ್ರಜಾ



ಕನ್ನಡ ಚಿತ್ರರಂಗದ ಹಿರಿಯ ಹಾಗೂ ಬಹುಮುಖ ಪ್ರತಿಭೆಯ ನಟ ಅನಂತ್ ನಾಗ್ ಅವರಿಗೆ ಕನ್ನಡ ಹಾಗೂ ಭಾರತೀಯ ಚಿತ್ರರಂಗಕ್ಕೆ ನೀಡಿದ ಅಪಾರ ಕೊಡುಗೆಗಾಗಿ 2024ನೇ ಸಾಲಿನ (72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ) ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಘೋಷಿಸಲಾಗಿದೆ. 300 ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಅನಂತ್ ಅವರಿಗೆ ಸೆಪ್ಟೆಂಬರ್ 22ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಐದು ದಶಕಗಳಿಗೂ ಹೆಚ್ಚು ಕಾಲ ತಮ್ಮ ಸಹಜ ಅಭಿನಯದ ಮೂಲಕ ಪ್ರೇಕ್ಷಕರನ್ನು ರಂಜಿಸಿರುವ ಅವರಿಗೆ ಸಂದ ಸೂಕ್ತ ಗೌರವ ಇದಾಗಿದೆ. ಗುಜರಾತ್‌ನ ಏಕ್ತಾ ನಗರದ (ಕೆವಾಡಿಯಾ) ಸ್ಟ್ಯಾಚು ಆಫ್ ಯೂನಿಟಿ ಆವರಣದಲ್ಲಿ ನಡೆಯಲಿದೆ. 72 ವರ್ಷಗಳ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ ಸಮಾರಂಭವು ನವದೆಹಲಿಯಿಂದ ಹೊರಗೆ, ಗುಜರಾತ್‌ನಲ್ಲಿ ಆಯೋಜನೆಗೊಳ್ಳುತ್ತಿದೆ. ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು ಅವರು ಈ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ವಿತರಿಸಲಿದ್ದಾರೆ. ಕನ್ನಡ ಚಿತ್ರರಂಗದ ಈ ಮೂವರು ದಿಗ್ಗಜರ ಸಾಧನೆ ಮತ್ತು ಕೊಡುಗೆಗಳು ಭಾರತೀಯ ಚಿತ್ರರಂಗದ ಇತಿಹಾಸದಲ್ಲಿ ಸದಾ ಚಿರಸ್ಥಾಯಿಯಾಗಿರಲಿವೆ.

## ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಬಂದ್ರೂ, ನಂಬದ ಅನಂತ್ ನಾಗ್



- ಕೇಂದ್ರ ಸರ್ಕಾರ, ಭಾರತೀಯ ಚಿತ್ರರಂಗದ ಅತ್ಯುನ್ನತ ಗೌರವ ಎನಿಸಿರುವ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ 2024ಕ್ಕೆ ಚಂದನವನದ ಹಿರಿಯ ನಟ ಅನಂತ್ ನಾಗ್ ಅವರನ್ನು ಆಯ್ಕೆ ಮಾಡಿದೆ.
- ನಟ ಅನಂತ್ ನಾಗ್ ಅವರಿಗೆ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಬಂದಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ಹಾಗೂ ಚಿತ್ರರಂಗದಿಂದ ಶುಭಾಶಯಗಳ ಮಹಾಪೂರವೇ ಹರಿದು ಬರುತ್ತಿದೆ.
- ಅನಂತ್ ನಾಗ್ ಅವರಿಗೆ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಗೌರವ ಸಂದಿರುವ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದಂತೆ ಅವರ ಪತ್ನಿ ಗಾಯತ್ರಿ ಅನಂತ್ ನಾಗ್ ಅವರು, ಪತಿ ಈ ವಿಚಾರವನ್ನು ತಿಳಿಸಿದ್ದಾರೆ. ಆದರೆ ಇದನ್ನು ನಂಬದ ಅನಂತ್ ನಾಗ್ ಅವರು, ಅದು ಸುಳ್ಳು ಸುದ್ದಿ ಎಂದು ನಕ್ಕು ಮಲಗಿದ್ದಾರೆ.







ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಭಾಜನರಾದ

## ಕನ್ನಡದ ಮೇರುನಟ ಅನಂತ ನಾಗ್

# ಅನಂತ ಗೌರವ

ಕನ್ನಡ, ಹಿಂದಿ, ಮರಾಠಿ ಸೇರಿದಂತೆ ಸುಮಾರು 300 ಕ್ಕೂ ಅಧಿಕ ಸಿನಿಮಾಗಳಲ್ಲಿ ತಮ್ಮ ಮನೋಜ್ಞ ಅಭಿನಯದ ಮೂಲಕ ಕೋಟ್ಯಾಂತರ ಅಭಿಮಾನಿಗಳನ್ನು ಸಂಪಾದಿಸಿರುವ ಸ್ಯಾಂಡಲ್‌ವುಡ್ ನಟ ಕನ್ನಡನಾಡಿನ ಹಿರಿಮೆ, ಹೆಮ್ಮೆಯಾದ ಅನಂತ ನಾಗ್ ಅವರಿಗೆ ಭಾರತದ ಸರ್ಕಾರ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಪ್ರಕಟಿಸಿದೆ.

ಬುಧವಾರ (ಸೆ.16) ಪ್ರೆಸ್ ಇನ್‌ಫಾರ್ಮೇಶನ್ ಬ್ಯೂರೊ ಈ ಮಾಹಿತಿಯನ್ನು ಅಧಿಕೃತವಾಗಿ ಹಂಚಿಕೊಂಡಿದ್ದು, ಸೆಪ್ಟೆಂಬರ್‌ನಲ್ಲಿ ಗುಜರಾತಿನಲ್ಲಿ ನಡೆಯಲಿರುವ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಅನಂತ ನಾಗ್ ಅವರಿಗೆ ನೀಡಲಾಗುತ್ತದೆ ಎಂದು ಹೇಳಲಾಗಿದೆ.

**ಪ್ರಧಾನಿ ಮೋದಿ ಹರ್ಷ!**

ಅನಂತ ನಾಗ್ ಅವರಿಗೆ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಣೆಯಾಗುತ್ತಿದಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಟ್ವಿಟ್ ಮಾಡುವ ಮೂಲಕ ಹಿರಿಯ ನಟನಿಗೆ ಶುಭಕೋರಿದ್ದಾರೆ.

ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಭಾಜನರಾಗಿರುವ ದಿಗ್ಗಜ ಅನಂತ ನಾಗ್ ಅವರಿಗೆ ಅಭಿನಂದನೆಗಳು ಎಂದಿರುವ ಪ್ರಧಾನಿ, ದಶಕಗಳ ಕಾಲ ತಮ್ಮ ಸಹಜ ಅಭಿನಯ, ಅದ್ಭುತ ಬಹುಮುಖಿ ಪ್ರತಿಭೆ ಮತ್ತು ಮೇಧಾವಿತನದ ಮೂಲಕ ಭಾರತೀಯ ಚಲನಚಿತ್ರರಂಗದ ಮೇಲೆ, ಅದರಲ್ಲೂ ವಿಶೇಷವಾಗಿ ಕನ್ನಡ ಚಿತ್ರರಂಗದ ಮೇಲೆ ಅಳಿಸಲಾಗದ ಛಾಪು ಮೂಡಿಸಿದ್ದಿರಿ. ನೀವು ನಿರ್ವಹಿಸಿದ ಪ್ರತಿಯೊಂದು ಪಾತ್ರಕ್ಕೂ ಅಪರೂಪದ ಆಳ ಹಾಗೂ ನೈಜತೆಯನ್ನು ತಂದುಕೊಟ್ಟಿದ್ದಿರಿ. ನಿಜಕ್ಕೂ ಅತ್ಯುನ್ನತ ಕಲಾವಿದರೊಬ್ಬರಿಗೆ ಸಂದಿರುವ ಅತ್ಯಂತ ಸೂಕ್ತವಾದ ಗೌರವ ಇದಾಗಿದೆ ಎಂದು ಮೋದಿ ಟ್ವಿಟ್ ಮಾಡಿದ್ದಾರೆ.

**ಅನಂತ್ ನಾಗ್ ಹಿನ್ನಲೆ**

ಅನಂತ ನಾಗ್ (ಅನಂತ ನಾಗರಕಟ್ಟೆ) ಅವರು ಭಾರತೀಯ ಚಲನಚಿತ್ರ ರಂಗದ ಮೇರುನಟರಾಗಿದ್ದು, ವಿಶೇಷ ವಾಗಿ ಕನ್ನಡ ಚಿತ್ರರಂಗದಲ್ಲಿ ತಮ್ಮ ಅಮೋಘ ಕೊಡುಗೆಯನ್ನು ನೀಡಿದ್ದಾರೆ. 1948ರ ಸೆಪ್ಟೆಂಬರ್ 4ರಂದು ಉತ್ತರಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಜನಿಸಿದ ಇವರು, ರಂಗಭೂಮಿಯ ಮೂಲಕ ತಮ್ಮ ನಟನಾ ವೃತ್ತಿಯನ್ನು ಆರಂಭಿಸಿ, ನಂತರ ಕನ್ನಡ ಮತ್ತು ಹಿಂದಿ ಸೇರಿದಂತೆ ಹಲವು ಭಾಷೆಗಳ ಚಿತ್ರಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದಾರೆ.

ಆರಂಭದಲ್ಲಿ ಮುಂಬೈನಲ್ಲಿ ಹವ್ಯಾಸಿ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದ ಇವರು, 1971ರಲ್ಲಿ ತೆರೆಕಂಡ ಸಂಕಲ್ಪ ಚಿತ್ರದ ಮೂಲಕ ಸಿನಿಮಾರಂಗಕ್ಕೆ ಪದಾರ್ಪಣೆ ಮಾಡಿದರು. ನಂತರ ಶ್ಯಾಮ್ ಬೆನಗಲ್ ಅವರ ಅಂಕುರ್ ಸೇರಿದಂತೆ ಹಲವು ಮಹತ್ವದ ಸಿನಿಮಾಗಳಲ್ಲಿ ನಟಿಸಿ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದರು.



**ಕನ್ನಡಕ್ಕೆ ಮರಳಿದ ಅನಂತ್!**

ಕನ್ನಡ ಚಿತ್ರರಂಗದಲ್ಲಿ ಕಮರ್ಷಿಯಲ್ ಹಾಗೂ ಕಲಾತ್ಮಕ ಚಿತ್ರಗಳೆರಡರಲ್ಲೂ ಸಮರ್ಥವಾಗಿ ನಟಿಸಿರುವ ಅನಂತ ನಾಗ್, 200ಕ್ಕೂ ಅಧಿಕ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಇವರು ನಟಿಸಿದ ಬೆಳದಿಂಗಳ ಬಾಲೆ, ಗಣೇಶನ ಮದುವೆ, ಉದ್ಭವ, ಚಂದನದ ಗೊಂಬೆ, ಮುಕ್ತ ಮುಕ್ತ ಮುಂತಾದ ಸಿನಿಮಾಗಳು ಮತ್ತು ಧಾರಾವಾಹಿಗಳು ಪ್ರೇಕ್ಷಕರ ಮನಸ್ಸಿನಲ್ಲಿ ಸದಾ ಉಳಿದುಕೊಂಡಿವೆ.

ತಮ್ಮ ಮೃದು ಸ್ವಭಾವದ ನಟನೆ, ವಿಭಿನ್ನ ಹಾವಭಾವ ಮತ್ತು ಅತ್ಯುತ್ತಮ ಸಂಭಾಷಣಾ ಶೈಲಿಯಿಂದ ಕನ್ನಡಿಗರ ಆರಾಧ್ಯ ದೈವವಾಗಿರುವ ಇವರು, ನಾಯಕನಾಗಿ ಮಾತ್ರವಲ್ಲದೆ ಪೋಷಕ ನಟನಾಗಿಯೂ ಕೂಡ ಸಿನಿಮಾಗಳಲ್ಲಿ ಸಾಟಿಯಿಲ್ಲದ ಅಭಿನಯವನ್ನು ನೀಡುತ್ತಾ ಬಂದಿದ್ದಾರೆ.

**ಪ್ರಶಸ್ತಿ ಹಾಗೂ ರಾಜಕೀಯ!**

ಚಲನಚಿತ್ರ ರಂಗದಲ್ಲಿ ಇವರು ಸಲ್ಲಿಸಿದ ವಿಶಿಷ್ಟ ಸೇವೆಗಾಗಿ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಒಲಿದುಬಂದಿವೆ. ಅನಂತನಾಗ್ ಅವರು ಹಲವಾರು ಫಿಲ್ಮ್‌ಫೇರ್ ಪ್ರಶಸ್ತಿಗಳು ಹಾಗೂ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆದು ಹೆಮ್ಮೆಗೆ ಪಾತ್ರರಾಗಿದ್ದಾರೆ.

ಕೇವಲ ನಟನೆಯಷ್ಟೇ ಅಲ್ಲದೆ, ಅವರು ರಾಜಕೀಯ ಕ್ಷೇತ್ರದಲ್ಲೂ ಗುರುತಿಸಿಕೊಂಡು ಕರ್ನಾಟಕ ಸರ್ಕಾರದ ಸಚಿವರಾಗಿ ಜನಪರ ಸೇವೆ ಸಲ್ಲಿಸಿದ್ದಾರೆ. ಸದ್ಯದಲ್ಲೂ ತಮ್ಮ ವಯಸ್ಸನ್ನು ಲೆಕ್ಕಿಸದೆ ವಿಭಿನ್ನ ಪಾತ್ರಗಳಲ್ಲಿ ನಟಿಸುವ ಮೂಲಕ ಇಂದಿನ ಯುವ ಪೀಳಿಗೆಯ ನಟರಿಗೂ ಸ್ಫೂರ್ತಿಯಾಗಿದ್ದಾರೆ ಮತ್ತು ಭಾರತೀಯ ಚಿತ್ರರಂಗದ ದಿಗ್ಗಜರ ಸಾಲಿನಲ್ಲಿ ಪ್ರಮುಖರಾಗಿ ಗೌರವಿಸಲ್ಪಡುತ್ತಿದ್ದಾರೆ.

**ಇದೆಲ್ಲವೂ ಕನ್ನಡಿಗರಿಂದಲೇ ಸಾಧ್ಯವಾಗಿದ್ದು: ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಕರುನಾಡಿಗೆ ಅರ್ಪಿಸಿದ ಅನಂತ್ ನಾಗ್**

ಕರ್ನಾಟಕ ಚಲನಚಿತ್ರ ವ್ಯವಸ್ಥೆ ಬಗ್ಗೆ ಪ್ರಸ್ತಾಪಿಸುತ್ತಾ, ಇದು ನನಗೆ ಬೇರೆಲ್ಲೂ ಸಾಧ್ಯವಾಗುತ್ತಿರಲಿಲ್ಲ ಎಂದು ಅನಂತ್ ನಾಗ್ ಹೇಳಿದರು.

ಚಿತ್ರರಂಗಕ್ಕೆ ನೀಡಿದ ಅಪಾರ ಕೊಡುಗೆ ಹಿನ್ನೆಲೆ, ಕನ್ನಡದ ಅತ್ಯಂತ ಜನಪ್ರಿಯ ನಟ ಅನಂತ್ ನಾಗ್ ಅವರು 2024ನೇ ಸಾಲಿನ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಹಿರಿಯ ನಟ ತಮ್ಮ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಕರ್ನಾಟಕದ ಜನತೆಗೆ ಅರ್ಪಿಸಿದ್ದಾರೆ. ತಮ್ಮ 5 ದಶಕಗಳಿಗೂ ಹೆಚ್ಚಿನ ವೃತ್ತಿಜೀವನವನ್ನು ರೂಪಿಸುವಲ್ಲಿ ರಾಜ್ಯದ ಫಿಲ್ಮ್‌ಮೇಕರ್ಸ್ ಮತ್ತು ಪ್ರೇಕ್ಷಕರ ಸಹಕಾರವನ್ನು ಇದೇ ವೇಳೆ ಸ್ಮರಿಸಿದರು.

> ಅನಂತ್ ಸಾಧನೆ ಬಗ್ಗೆ ಹೆಮ್ಮೆ ಇದೆ
>
> ಇನ್ನು ತಮ್ಮ ಪತಿಯ ನಟನಾ ಪಯಣದ ಬಗ್ಗೆ ಮಾತನಾಡಿದ ಗಾಯತ್ರಿ ಅನಂತ್ ನಾಗ್ ಅವರು, ಒಬ್ಬ ನಟನಾಗಿ ಅವರ ಸಾಧನೆ ಬಗ್ಗೆ ನನಗೆ ಅತ್ಯಂತ ಹೆಮ್ಮೆ ಇದೆ. ಅವರು ಎಂದಿಗೂ ಬೇರೆಯವರ ಹಾದಿಯಲ್ಲಿ ನಡೆದವರಲ್ಲ. ತಮ್ಮದೇ ಆದ ವಿಶಿಷ್ಟ ಹಾದಿಯನ್ನು ರೂಪಿಸಿಕೊಂಡು ಬಂದವರು. ಅವರು ಬೇರೆ ಹಾದಿ ತುಳಿದರೂ ಸಹ ಕರ್ನಾಟಕದ ಜನತೆ ಅವರನ್ನು ಅಪಾರವಾಗಿ ಪ್ರೀತಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ತಮಗೆ ದೊರೆತ ಅವಕಾಶಗಳು ಮತ್ತು ವಾತಾವರಣವು, ಭಾರತದ ಬೇರೆಲ್ಲೂ ಸಾಧ್ಯವಾಗುತ್ತಿರಲಿಲ್ಲವೇನೋ. ಈ ಭಾವನೆ ಕನ್ನಡದ ಕಲಾತ್ಮಕ ಹಾಗೂ ವಾಣಿಜ್ಯ ಚಲನಚಿತ್ರಗಳೆರಡರಲ್ಲೂ ತೊಡಗಿಸಿಕೊಳ್ಳಲು ತಮಗೆ ಸಾಧ್ಯವಾಗಿಸಿತು ಎಂದು ಮಾಧ್ಯಮದೊಂದಿಗೆ ಮಾತನಾಡುವ ವೇಳೆ ತಿಳಿಸಿದರು. ಮುಂದುವರಿದು, ಪ್ರಧಾನಿ ನರೇಂದ್ರ ಮೋದಿ ಅವರು ಈ ಮನ್ನಣೆ ಬಗ್ಗೆ ಟ್ವೀಟ್ ಮಾಡಿರುವುದಕ್ಕೆ ತಾವು ಕೃತಜ್ಞರಾಗಿರುವುದಾಗಿ ಹೇಳಿದರು. ನಂತರ ತಮ್ಮ ಪಯಣದಲ್ಲಿ ಕರ್ನಾಟಕ ವಹಿಸಿದ ಪಾತ್ರವನ್ನು ಎತ್ತಿಹಿಡಿದರು.

**ನಟ ಅನಂತ್ ನಾಗ್**

ಇದೆಲ್ಲವೂ ಕರ್ನಾಟಕದಿಂದಲೇ, ಕೇವಲ ಕರ್ನಾಟಕದಿಂದಲೇ ಸಾಧ್ಯವಾಯಿತು ಎಂದರು. 2025ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ಸ್ವೀಕರಿಸಿದಾಗ ಪ್ರತಿಕ್ರಿಯಿಸಿದಂತೆ, ಈ ಗೌರವವನ್ನೂ ಕರ್ನಾಟಕಕ್ಕೆ ಅರ್ಪಿಸಿದರು. ವಿವಿಧ ಪ್ರಕಾರದ ಚಲನಚಿತ್ರಗಳಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳುವಲ್ಲಿ ರಾಜ್ಯದ ಸಿನಿಮಾ ವ್ಯವಸ್ಥೆ ಮತ್ತು ಪ್ರೇಕ್ಷಕರು ಪ್ರಮುಖ ಪಾತ್ರ ವಹಿಸಿದ್ದಾರೆಂದು ಒತ್ತಿ ಹೇಳಿದರು.

ಕರ್ನಾಟಕದಲ್ಲಿರುವ ವಿಶಿಷ್ಟ ವಾತಾವರಣ ಮತ್ತು ಕೆಲಸದ ವ್ಯವಸ್ಥೆ ಬಗ್ಗೆ ಪ್ರಸ್ತಾಪಿಸುತ್ತಾ, ಇದು ನನಗೆ ಬೇರೆಲ್ಲೂ ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದರು. ನಿರ್ಮಾಪಕರು, ನಿರ್ದೇಶಕರು ಹಾಗೂ ನಟ - ನಟಿಯರನ್ನು ವಿಶೇಷವಾಗಿ ಸ್ಮರಿಸಿದರಲ್ಲದೇ, ಪ್ರೇಕ್ಷಕರಿಗೆ ಹೆಚ್ಚಿನ ಒತ್ತು ನೀಡಿದರು. ಅವರು ಅತ್ಯಂತ ಸುಶಿಕ್ಷಿತ ಮತ್ತು ಸೂಕ್ಷ್ಮ ಗ್ರಹಿಕೆಯುಳ್ಳ ಪ್ರೇಕ್ಷಕರು ಎಂದು ಉಲ್ಲೇಖಿಸಿದರು.

ಕರ್ನಾಟಕದ ಸಂಸ್ಕೃತಿ ಮತ್ತು ಸಂಸ್ಕಾರಗಳ ಬಗ್ಗೆ ತಮಗಿರುವ ಹೆಮ್ಮೆಯನ್ನೂ ನಟ ಈ ವೇಳೆ ವ್ಯಕ್ತಪಡಿಸಿದರು. ಕಲೆಗಳ ಬಗೆಗಿನ ರಾಜ್ಯದ ಗೌರವ ಹಾಗೂ ಪ್ರೋತ್ಸಾಹವು ತಮ್ಮ ವೃತ್ತಿಜೀವನ ರೂಪುಗೊಳ್ಳಲು ಪೂರಕವಾದ ಸನ್ನಿವೇಶಗಳನ್ನು ಸೃಷ್ಟಿಸಲು ನೆರವಾಯಿತು ಎಂದರು.

ನನಗೆ 12 ವರ್ಷವಿದ್ದಾಗ ನನ್ನನ್ನು ಬಾಂಬೆಗೆ ಕಳುಹಿಸಲಾಯಿತು. ಸಿನಿಮಾಗಾಗಿ ಮರಳಿದಾಗ, ನನಗೆ ಇಲ್ಲಿ ಅವಕಾಶಗಳು ಸಿಕ್ಕವು. ಸಿನಿಮಾದಲ್ಲಿ ಏನಾದರೂ ಸಾಧಿಸಲು ಇದೇ ಸೂಕ್ತ ಸ್ಥಳ ಎಂದು ನನಗೆ ಅರಿವಾಯಿತು. ಏಕೆಂದರೆ, ಕಾಲೇಜು ವಿದ್ಯಾರ್ಥಿಯಾಗಿದ್ದಾಗ ನಾನು ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದೆ. 18ನೇ ವಯಸ್ಸಿನಲ್ಲಿ ರಂಗಭೂಮಿಗೆ ಪ್ರವೇಶಿಸಿದ ನಂತರ, ಸುಮಾರು 5 ವರ್ಷಗಳ ಕಾಲ ನಾಟಕಗಳಲ್ಲಿ ತೊಡಗಿಸಿಕೊಂಡಿದ್ದೆ. ಆ ಬಳಿಕ ನನಗೆ ಅವಕಾಶಗಳು ಸಿಗಲಾರಂಭಿಸಿದವು. ಅಲ್ಲಿ ಕಲಾತ್ಮಕ ಚಲನಚಿತ್ರಗಳನ್ನು ಮಾಡುವುದು ಕಷ್ಟ ಎಂದನಿಸಿತ್ತು. ಆದರೆ ನಾನಿಲ್ಲಿಗೆ ಬಂದಾಗ, ವಾತಾವರಣ ಸಂಪೂರ್ಣ ಭಿನ್ನವಾಗಿತ್ತು. ಇಲ್ಲಿ ಕಲಾತ್ಮಕ ಚಿತ್ರಗಳಿಗೆ ಪ್ರೇಕ್ಷಕರಿದ್ದರು. ಹಾಗೆಯೇ ವಾಣಿಜ್ಯ ಚಿತ್ರಗಳಿಗೂ ಪ್ರೇಕ್ಷಕರಿದ್ದರು. ಹಾಗಾಗಿ, ನಾನಿಲ್ಲಿ ಏನು ಮಾಡಿದ್ದೇನೋ ಅದನ್ನು ಭಾರತದ ಬೇರೆಲ್ಲೂ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದು ತಮ್ಮ ಅಭಿಪ್ರಾಯ ಹಂಚಿಕೊಂಡರು.

**ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿನಂದನೆ:** ಕನ್ನಡ ಚಿತ್ರರಂಗದ ಗರಿಮೆ, ಮೇರು ನಟ ಅನಂತ್ ನಾಗ್ ಅವರಿಗೆ ಭಾರತೀಯ ಚಿತ್ರರಂಗದ ಅತ್ಯುನ್ನತ ಗೌರವವಾದ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ-2024 ಲಭಿಸಿರುವುದು ಸಮಸ್ತ ಕನ್ನಡಿಗರಿಗೆ ಅತ್ಯಂತ ಹೆಮ್ಮೆಯ ಮತ್ತು ಸಂತಸದ ಕ್ಷಣ. ತಮ್ಮ ನೈಜ ನಟನೆ, ಸಂಯಮ ಹಾಗೂ ವಿಶಿಷ್ಟ ಪಾತ್ರಗಳ ಮೂಲಕ ದಶಕಗಳ ಕಾಲ ಭಾರತೀಯ ಕಲಾರಂಗವನ್ನು ಶ್ರೀಮಂತಗೊಳಿಸಿದ ಅನಂತ್ ನಾಗ್ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಈ ಗೌರವ ಕನ್ನಡ ಕಲಾಜಗತ್ತಿಗೆ ಸಂದ ಮಹಾನ್ ಮನ್ನಣೆ ಎಂದು ಮುಖ್ಯಮಂತ್ರಿ ಎಕ್ಸ್ ಮೂಲಕ ತಿಳಿಸಿದ್ದಾರೆ.

---

# ಟಾಸ್, ಸಿಟಿ ಲೈಟ್ಸ್ ನಡುವೆ ಮಹಾಕವಿಯ ಆಗಮನ

## ಕನ್ನಡ ಚಿತ್ರರಂಗದಲ್ಲಿ ಸಾಲು ಸಾಲು ಸಿನಿಮಾಗಳು!

ಅಮರ್ಥ ಚಿತ್ರದಲ್ಲಿ ಶ್ರೀನಗರ ಕಿಟ್ಟಿ ಮೇಘನಾ ಬರ್ತಿದ್ದಾರೆ. ಮಹಾಕವಿ ಪಂಪನಾಗಿ ಕಿಶೋರ್ ಆಗಮಿಸುತ್ತಿದ್ದಾರೆ. ಸಿಟಿ ಲೈಟ್ಸ್ ಮೂಲಕ ದುನಿಯಾ ವಿಜಯ್ ಮಗಳು ಮೊನಿಷಾ ವಿಜಯ್‌ಕುಮಾರ್ ನಾಯಕಿ ಆಗಿ ಬರ್ತಿದ್ದಾರೆ. ವಿನಯ್ ರಾಜ್‌ಕುಮಾರ್ ಈ ಚಿತ್ರದ ನಾಯಕರಾಗಿದ್ದಾರೆ. ಟಾಸ್ ಕನ್ನಡ ಮತ್ತು ತುಳು ಭಾಷೆಯಲ್ಲಿ ಬರ್ತಿದೆ. ಈ ನಾಲ್ಕೂ ಚಿತ್ರಗಳ ಇನ್ನಷ್ಟು ವಿವರ ಇಲ್ಲಿದೆ ಓದಿ.

**ಆ ಕಡೆ ಟಾಸ್ ಈ ಕಡೆ ಸಿಟಿ ಲೈಟ್ಸ್; ಅಮರ್ಥ ಜೊತೆಗೆ ಮಹಾಕವಿಯ ಆಗಮನ!**

ಕನ್ನಡದಲ್ಲಿ ನಾಲ್ಕು ಸಿನಿಮಾ ಬರ್ತಿವೆ. ಮೂರು ಸಿನಿಮಾಗಳ ನಾಯಕರು ಪರಿಚಯ ಇದ್ದಾರೆ. ಟಾಸ್ ಅನ್ನುವ ಚಿತ್ರದ ನಾಯಕರು ಕನ್ನಡಕ್ಕೆ ಹೊಸಬರೇ ನೋಡಿ. ಈ ನಾಲ್ಕು ಚಿತ್ರಗಳಲ್ಲಿ ದುನಿಯಾ ವಿಜಯ್ ಡೈರೆಕ್ಷನ್ ಮಾಡಿರೋ ಚಿತ್ರವೂ ಇದೆ. ಶ್ರೀನಗರ ಕಿಟ್ಟಿ ಹಾಗೂ ಮೇಘನಾ ರಾಜ್ ನಟನೆಯ ಚಿತ್ರವೂ ಇದೆ. ಈ ಎಲ್ಲ ಚಿತ್ರಗಳ ಇನ್ನಷ್ಟು ಮಾಹಿತಿ ಇಲ್ಲಿದೆ ಓದಿ.

**ಸಿಟಿ ಲೈಟ್ಸ್ ಸಿನಿಮಾ**

ಸಿಟಿ ಲೈಟ್ಸ್ ಚಿತ್ರ, ಈ ಶುಕ್ರವಾರ ರಿಲೀಸ್ ಆಗುತ್ತಿದೆ. ಸೆಪ್ಟೆಂಬರ್-18 ರಂದು ಇದು ತೆರೆ ಕಾಣುತ್ತಿದೆ. ರಾಜ್ಯದ 150 ಪ್ಲಸ್ ಥಿಯೇಟರ್ ಅಲ್ಲಿ ಈ ಸಿನಿಮಾ ಬಿಡುಗಡೆ ಆಗುತ್ತಿದೆ.

ದುನಿಯಾ ವಿಜಯ್ ಕುಮಾರ್ ಈ ಚಿತ್ರವನ್ನ ಡೈರೆಕ್ಷನ್ ಮಾಡಿದ್ದಾರೆ. ಮಗಳು ಮೊನಿಷಾ ವಿಜಯ್ ಕಮಾರ್ ಈ ಚಿತ್ರದ ಮೂಲಕ ನಾಯಕಿ ಆಗಿದ್ದಾರೆ. ಕನ್ನಡ ಇಂಡಸ್ಟ್ರಿಗೂ ಕಾಲಿಡುತ್ತಿದ್ದಾರೆ.

**ವಿನಯ್ ಹೀರೋ**

ವಿನಯ್ ರಾಜ್‌ಕುಮಾರ್ ಈ ಚಿತ್ರದ ನಾಯಕರಾಗಿದ್ದಾರೆ. ಈ ಹಿಂದಿನ ಚಿತ್ರಗಳಲ್ಲಿ ಇದ್ದ ಪಾತ್ರಗಳಿಗಿಂತಲೂ ಇಲ್ಲಿ ವಿಭಿನ್ನವಾಗಿಯೇ ಕಾಣಿಸುತ್ತಿದ್ದಾರೆ.

ಸ್ಯಾಂಡಲ್‌ವುಡ್ ಮಯೂರ ಅನ್ನುವ ಬಿರುದು ಕೂಡ ಈ ಚಿತ್ರದಲ್ಲಿ ಕೊಡಲಾಗಿದೆ. ಚರಣ್ ರಾಜ್ ಈ ಚಿತ್ರಕ್ಕೆ ಮ್ಯೂಸಿಕ್ ಮಾಡಿದ್ದಾರೆ. ಸಲಗ, ಭೀಮ ಆದ್ಮೇಲೆ ಸಿಟಿ ಲೈಟ್ಸ್‌ಗೆ ಮ್ಯೂಸಿಕ್ ಮಾಡಿದ್ದಾರೆ.

ಈ ಚಿತ್ರದಲ್ಲಿ ಉಮಾಶ್ರೀ, ಡೈಲಾಗ್ ರೈಟರ್ ಮಾಸ್ತಿ ಕೂಡ ಅಭಿನಯಿಸಿದ್ದಾರೆ. ನವ ಕಲಾವಿದರಿಗೆ ಇಲ್ಲೂ ದುನಿಯಾ ವಿಜಯ್ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಚಿತ್ರ ಗೆಲುವಿನ ಭರವಸೆ ಮೂಡಿಸಿದೆ.

**ಅಮರ್ಥ ಸಿನಿಮಾ**

ಅಮರ್ಥ ಸಿನಿಮಾ ಕೂಡ ಸೆಪ್ಟೆಂಬರ್-18 ರಂದು ತೆರೆ ಕಾಣುತ್ತಿದೆ. ಬಹುಪರಾಕ್ ಮತ್ತು ಬುದ್ಧಿವಂತ-2 ಚಿತ್ರ ಆದ್ಮೇಲೆ ಮೇಘನಾ ರಾಜ್ ಹಾಗೂ ಶ್ರೀನಗರ ಕಿಟ್ಟಿ ಈ ಚಿತ್ರದಲ್ಲಿ ತೆರೆ ಹಂಚಿಕೊಂಡಿದ್ದಾರೆ.








ಇದು ಕೌಟುಂಬಿಕ ಮತ್ತು ಭಾವನಾತ್ಮಕ ಚಿತ್ರವೇ ಆಗಿದೆ. ಈ ಚಿತ್ರವನ್ನ ಗುರು ಹೆಗ್ಡೆ ಮತ್ತು ವಿನಯ್ ಪ್ರೀತಮ್ ಜೊತೆಯಾಗಿಯೇ ಡೈರೆಕ್ಷನ್ ಮಾಡಿದ್ದಾರೆ. ಇದು ಪ್ರತಿ ಸಾಮಾನ್ಯ ಮನುಷ್ಯನ ಜೀವನಕ್ಕೂ ಕನೆಕ್ಟ್ ಆಗುವ ಸಿನಿಮಾ ಅಂತ ಹೇಳಿಕೊಂಡಿದ್ದಾರೆ.

**ಮಹಾಕವಿ ಪಂಪನ ಸಿನಿಮಾ**

ಮಹಾಕವಿ ಪಂಪನ ಮೇಲೆ ಬರಗೂರು ರಾಮಚಂದ್ರಪ್ಪನವರು ಸಿನಿಮಾ ಮಾಡಿದ್ದಾರೆ. ಈ ಚಿತ್ರದಲ್ಲಿ ಕಿಶೋರ್ ಅವರು ಆದಿಕವಿ ಪಂಪನ ಪಾತ್ರ ಮಾಡಿದ್ದಾರೆ.

ಬಿಗ್ ಬಾಸ್ ಖ್ಯಾತಿಯ ನಟಿ ಅನುಷಾ ರೈ ಪ್ರಮುಖ ರೋಲ್ ಮಾಡಿದ್ದಾರೆ.

ಈ ಚಿತ್ರ ಸೆಪ್ಟೆಂಬರ್-18 ರಂದು ಬಿಡುಗಡೆ ಆಗುತ್ತಿದೆ. ಇದು ಬರಗೂರು ರಾಮಚಂದ್ರಪ್ಪನವರ 25 ನೇ ಚಿತ್ರವಾಗಿದೆ.

**ಕನ್ನಡ ಟಾಸ್ ಸಿನಿಮಾ**

ಈ ಚಿತ್ರ, ಒಂದು ಆ್ಯಕ್ಷನ್ ಸಿನಿಮಾ ಆಗಿದೆ. ಕರಾವಳಿಯ ನಾಯಕ ನಟ ಅರ್ಜುನ್ ದೇವ್ ಈ ಚಿತ್ರವನ್ನ ಡೈರೆಕ್ಷನ್ ಮಾಡಿದ್ದಾರೆ. ಇವರೇ ನಾಯಕರೂ ಆಗಿದ್ದಾರೆ.

ಈ ಚಿತ್ರವನ್ನ ಗೋಲ್ಡನ್ ಸ್ಟಾರ್ ಗಣೇಶ್ ಅವರು ತಮ್ಮ ಬ್ಯಾನರ್ ಮೂಲಕ ಪ್ರಸೆಂಟ್ ಮಾಡಿದ್ದಾರೆ. ಕಪಾಲಿ ಮಾಲ್ ಅಲ್ಲಿರೋ ಮಲ್ಟಿಪ್ಲೆಕ್ಸ್ ಅಲ್ಲಿ ಚಿತ್ರದ ಟ್ರೈಲರ್ ಕೂಡ ರಿಲೀಸ್ ಮಾಡಿದ್ದಾರೆ

**ಎಷ್ಟು ಥಿಯೇಟರ್ ಅಲ್ಲಿ ರಿಲೀಸ್**

ಟಾಸ್ ಚಿತ್ರ ರಾಜ್ಯದ 30 ಸಿಂಗಲ್ ಥಿಯೇಟರ್ ಅಲ್ಲಿ ರಿಲೀಸ್ ಆಗುತ್ತಿದೆ. 40 ಮಲ್ಟಿಪ್ಲೆಕ್ಸ್ ಅಲ್ಲಿ ತೆರೆ ಕಾಣುತ್ತಿದೆ. ಇದು ಕನ್ನಡ ಭಾಷೆಯ ವಿಚಾರ ಆಯಿತು.

ಆದರೆ, ಇದು ತುಳು ಭಾಷೆಯಲ್ಲೂ ಇದು ಬರ್ತಿದೆ. ರಾಜ್ಯದ 10 ಥಿಯೇಟರ್‌ಗಳಲ್ಲಿ ತುಳು ಭಾಷೆಯ ಟಾಸ್ ರಿಲೀಸ್ ಆಗುತ್ತಿದೆ ಅಂತ ಹೇಳಬಹುದು.

---

## ಮನರಂಜನಾತ್ಮಕ ಹೆಗ್ಗಣ ಮುದ್ದು ಟ್ರೇಲರ್ ರಿಲೀಸ್: ಡಾಲಿ ಧನಂಜಯ್ ನಿರ್ಮಾಣದ ಸಿನಿಮಾ ಇದೇ ಸೆ.25ಕ್ಕೆ ಬಿಡುಗಡೆ

ಪೂರ್ಣಚಂದ್ರ ಮೈಸೂರು ಮತ್ತು ಅರುಣ್ ಸಾಗರ್ ಅವರ ಪುತ್ರಿ ಅದಿತಿ ಸಾಗರ್ ತೆರೆಹಂಚಿಕೊಂಡಿರುವ ಹೆಗ್ಗಣ ಮುದ್ದು ಚಿತ್ರದ ಟ್ರೇಲರ್ ಅನಾವರಣಗೊಂಡಿದೆ. ಹೆತ್ತವರಿಗೆ ಹೆಗ್ಗಣ ಮುದ್ದು ಎಂಬ ಜನಪ್ರಿಯ ಗಾದೆ ಮಾತನ್ನು ಕೇಳಿರುತ್ತೀರಿ. ಇದೇ ಶೀರ್ಷಿಕೆಯಡಿ ಸಿನಿಮಾವೊಂದು ಮೂಡಿಬರುತ್ತಿರೋದು ನಿಮಗೆ ತಿಳಿದಿರುವ ವಿಚಾರವೇ. ಬಿಡುಗಡೆ ಹೊಸ್ತಿಲಿನಲ್ಲಿರುವ ಮನರಂಜನಾತ್ಮಕ ಚಿತ್ರದ ಟ್ರೇಲರ್ ಅನಾವರಣಗೊಂಡಿದೆ.

**ನಟ-ನಿರ್ಮಾಪಕ ಡಾಲಿ ಧನಂಜಯ್:** ಕನ್ನಡದ ಖ್ಯಾತ ಚಲನಚಿತ್ರ ನಿರ್ಮಾಣ ಸಂಸ್ಥೆಯಾದ ಡಾಲಿ ಪಿಕ್ಚರ್ಸ್ ಹೊಸಬರಿಗೆ ಕಂಟೆಂಟ್ ಚಿತ್ರಗಳ ಮುಖೇನ ಕನ್ನಡ ಚಿತ್ರರಂಗದಲ್ಲಿ ಹೆಸರು ಮಾಡುತ್ತಿದೆ. ಬ್ಯಾಕ್ ಟು ಬ್ಯಾಕ್ ಉತ್ತಮ ಸಿನಿಮಾಗಳನ್ನು ನೀಡಿರುವ ಡಾಲಿ ಪಿಕ್ಚರ್ಸ್ ಇದೀಗ ಮತ್ತೊಂದು ಹಿಟ್ ನೀಡಲು ಸಜ್ಜಾಗಿದೆ. ಹೆಗ್ಗಣ ಮುದ್ದು ಸಿನಿಮಾಗೆ ಪ್ರೇಕ್ಷಕರು ಯಾವ ರೀತಿ ಸ್ಪಂದಿಸುತ್ತಾರೆ ಅನ್ನೋದನ್ನು ಕಾದು ನೋಡಬೇಕಿದೆ. ತಮ್ಮ ಅಮೋಘ ಅಭಿನಯದಿಂದ ಕನ್ನಡ ಚಿತ್ರರಂಗದ ನಟರಾಕ್ಷಸ ಎಂದೇ ಖ್ಯಾತರಾಗಿರುವ ಡಾಲಿ ಧನಂಜಯ್ ಓರ್ವ ಜನಪ್ರಿಯ ನಿರ್ಮಾಪಕನೂ ಹೌದು. ಫ್ಯಾಮಿಲಿ ಮ್ಯಾನ್ ಕೂಡಾ ಹೌದು. ಬ್ಯಾಕ್ ಟು ಬ್ಯಾಕ್ ಸಿನಿಮಾಗಳ ನಡುವೆ ಇತ್ತೀಚೆಗೆ ಸೋಷಿಯಲ್ ಮೀಡಿಯಾದಲ್ಲಿ ಮೊದಲ ಮಗುವಿನ ಫೋಟೋ, ಹೆಸರು ಮತ್ತು ಅರ್ಥವನ್ನು ಬಹಿರಂಗಪಡಿಸಿದ್ದರು. ಮಗನ ಹೆಸರು ಎರೆಯ ಎಂದ ನಟ ಅರ್ಥವನ್ನೂ ಬಹಿರಂಗಪಡಿಸಿದ್ದರು. ಪುರಾತನ ಕನ್ನಡ ಪರಂಪರೆಯ ಗೌರವಪೂರ್ಣ ಪದವಾಗಿದ್ದು, ಇದರ ಅರ್ಥ ಒಡೆಯ, ಸ್ವಾಮಿ, ಅಧಿಪತಿ - ಒಂದು ಕಾಲದಲ್ಲಿ ರಾಜರು ಮತ್ತು ಅರಸರನ್ನು ಗೌರವದಿಂದ ಸಂಬೋಧಿಸಲು ಬಳಸುತ್ತಿದ್ದ ಹೆಸರು. ಇತಿಹಾಸದ ಪುಟಗಳಲ್ಲಿ, ಚಾಲುಕ್ಯರ ಮಹಾರಾಜ ಇಮ್ಮಡಿ ಪುಲಕೇಶಿ ಅವರ ಬಾಲ್ಯದ ಹೆಸರಾಗಿಯೂ ಎರೆಯ ಎಂಬ ಹೆಸರು ಕಾಣಿಸುತ್ತದೆ ಎಂದು ತಿಳಿಸಿದ್ದರು.



### ಕನ್ನಡ ಸಾಹಿತ್ಯದಲ್ಲಿ ಕಾಡು ವಿಚಾರ ಸಂಕಿರಣದಲ್ಲಿ ಬಸವರಾಜು ಕಲ್ಗುಡಿ ಅಭಿಮತ

# ನಿಸರ್ಗ ಉಳಿದರೆ ಮಾತ್ರ ಮನುಷ್ಯನ ಅಸ್ತಿತ್ವ

• ಪ್ರಜೋದಯ ವರದಿ



**ಹಾಸನ:** ಆಧುನಿಕತೆಯ ಹೆಸರಿನಲ್ಲಿ ನಿಸರ್ಗದ ಮೇಲೆ ನಡೆಯುತ್ತಿರುವ ಅತಿಯಾದ ಹಸ್ತಕ್ಷೇಪದಿಂದ ಪರಿಸರದ ಸಮತೋಲನಕ್ಕೆ ಧಕ್ಕೆಯಾಗುತ್ತಿದೆ. ನಿಸರ್ಗ ಉಳಿದರೆ ಮಾತ್ರ ಮನುಷ್ಯನ ಅಸ್ತಿತ್ವವೂ ಉಳಿಯಲು ಸಾಧ್ಯ. ಹೀಗಾಗಿ ಪರಿಸರ ಸಂರಕ್ಷಣೆಯ ಹೊಣೆಗಾರಿಕೆಯನ್ನು ಪ್ರತಿಯೊಬ್ಬರೂ ವಹಿಸಬೇಕು ಎಂದು ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಮಂಡಳಿ ಸಂಚಾಲಕ ಬಸವರಾಜು ಕಲ್ಗುಡಿ ಅವರು ಹೇಳಿದರು.

ನಗರದ ಎ.ವಿ. ಕಾಂತಮ್ಮ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಸಾಹಿತ್ಯ ಅಕಾಡೆಮಿ ಹಾಗು ಕಾಲೇಜಿನ ಕನ್ನಡ ವಿಭಾಗದ ಆಶ್ರಯದಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯದಲ್ಲಿ ಕಾಡು’ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಕಾಡು ಎಂದರೆ ಕೇವಲ ಮರ-ಗಿಡಗಳು ಹಾಗೂ ನೈಸರ್ಗಿಕ ಸಂಪನ್ಮೂಲಗಳ ತಾಣವಲ್ಲ, ಅದು ಮನುಷ್ಯನ ಬದುಕಿನ ಹಲವು ಮೌಲ್ಯಗಳನ್ನು ಕಲಿಸುವ ಪಾಠಶಾಲೆ ಯಾಗಿದೆ. ಮನುಷ್ಯ ಮತ್ತು ನಿಸರ್ಗದ ನಡುವಿನ ಅವಿನಾಭಾವ ಸಂಬಂಧವನ್ನು ಸಾಹಿತ್ಯ ಹಲವು ಆಯಾಮಗಳಲ್ಲಿ ಕಟ್ಟಿಕೊಟ್ಟಿದೆ ಎಂದರು.

ಕನ್ನಡ ಸಾಹಿತ್ಯದಲ್ಲಿ ಕಾಡಿನ ಅಭಿವ್ಯಕ್ತಿ, ಕಾಡು ಹಾಗೂ ಮನುಷ್ಯನ ನಡುವಿನ ಸಂಬಂಧದ ಜತೆಗೆ ಅದರ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಮಹತ್ವದ ಬಗ್ಗೆಯೂ ಚರ್ಚೆ ನಡೆಯಬೇಕು. ಸಾಹಿತ್ಯದ ಮೂಲಕ ಪರಿಸರದ ಕುರಿತ ಅರಿವು ಹಾಗೂ ಕಾಳಜಿಯನ್ನು ಮತ್ತಷ್ಟು ವಿಸ್ತರಿಸುವ ಅಗತ್ಯವಿದೆ ಎಂದು ಹೇಳಿದರು.

ಎಂ.ಟಿ.ಇ.ಎಸ್. ಅಧ್ಯಕ್ಷ ಬಿ. ಆರ್. ಗುರುದೇವ್ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾಡಿನ ನಿರ್ಮಾಣಕ್ಕಾಗಿ ಹಲವು ವರ್ಷಗಳಲ್ಲಿ ಕಾಡುಗಳನ್ನು ಕಡಿದು ನೈಸರ್ಗಿಕ ಸಂಪತ್ತನ್ನು ಬಳಸಿಕೊಂಡಿದ್ದೇವೆ. ಇದೀಗ ಪರಿಸರ ಸಮತೋಲನ ಕಾಪಾಡಲು ಅರಣ್ಯವನ್ನು ಉಳಿಸುವ ಜವಾಬ್ದಾರಿಯನ್ನೂ ನಾವೇ ಹೊರಬೇಕಾಗಿದೆ. ವಿದ್ಯಾರ್ಥಿಗಳಲ್ಲಿ ಬಾಲ್ಯದಿಂದಲೇ ಪರಿಸರದ ಬಗ್ಗೆ ಜಾಗೃತಿ ಮೂಡಿಸಬೇಕು. ತ್ಯಾಜ್ಯ ವಿಂಗಡಣೆ, ಮರುಬಳಕೆ ಸೇರಿದಂತೆ ಪರಿಸರ ಸ್ನೇಹಿ ಕ್ರಮಗಳನ್ನು ಕೇವಲ ಅಭಿಯಾನಗಳಿಗೆ ಸೀಮಿತಗೊಳಿಸದೆ ದೈನಂದಿನ ಜೀವನದ ಭಾಗವಾಗಿಸಿಕೊಳ್ಳಬೇಕು ಎಂದರು.

ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಮಂಡಳಿ ಸದಸ್ಯ ವಿಜಯಕುಮಾರ್ ಕಟಗಿಹಳ್ಳಿ ಮಠದ ವಿಜಯಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಲೇಜಿನ ಉಪಾಧ್ಯಕ್ಷ ಅರ್ಜುನ್ ಗುರುದೇವ್, ಪ್ರಾಂಶುಪಾಲೆ ಶಶಿಕಲಾ, ಪ್ರಾಂಶುಪಾಲ ಸೀ.ಚ. ಯತೀಶ್ವರ್, ಸಾಹಿತಿ ಹಾಡ್ಲಹಳ್ಳಿ ನಾಗರಾಜು ಉಪಸ್ಥಿತರಿದ್ದರು.

### ಸೆ.23, 24 ರಂದು ಕ್ಷೇತ್ರೋತ್ಸವ

ಹಾಸನ: ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯಿತಿ ಮತ್ತು ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಸೋಮನಹಳ್ಳಿ ಕಾವಲು ಇವರುಗಳ ಸಹಭಾಗಿತ್ವದೊಂದಿಗೆ ಹಾಸನ ತಾಲ್ಲೂಕಿನ ದುದ್ದ ಹೋಬಳಿಯಲ್ಲಿ ಆಲೂಗಡ್ಡೆ ಬೆಳೆಯ ವಿನೂತನ ತಳಿಯಾದ ಕುಫ್ರಿ ಕರಣ್ ತಳಿಯ ಬೆಳವಣಿಗೆ ಹಂತ, ಬೇಸಾಯ ಕ್ರಮಗಳು, ಕೀಟ ಮತ್ತು ರೋಗ ನಿರ್ವಹಣೆ ಹಾಗೂ ಇಳುವರಿ ಕುರಿತಾದ ಸಂಪೂರ್ಣ ತಾಂತ್ರಿಕ ಮಾಹಿತಿಯನ್ನು ರೈತರಿಗೆ ಪರಿಚಯಿಸುವ ಉದ್ದೇಶದಿಂದ 2 ದಿನಗಳ ಕ್ಷೇತ್ರೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಪಂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

ಸೆ.23 ರಂದು ಬಿ. ಬೈರಾಪುರ ಗ್ರಾಮದ ಮಹೇಶ್ ಬಿನ್ ಕರಿಬಸಪ್ಪ ಹಾಗೂ ಸೆ.24 ರಂದು ಗೌರಿಪುರ ಸೋಮನಹಳ್ಳಿ ಕಾವಲು ಗ್ರಾಮದ ದೀಪಕ್ ಬಿನ್ ಕೃಷ್ಣಗೌಡ ಅವರ ಜಮೀನಿನಲ್ಲಿ ಕ್ಷೇತ್ರೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ,

ಜಿಲ್ಲೆಯ ರೈತರುಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸದರಿ ಕಾರ್ಯಕ್ರಮಕ್ಕೆ ಆಗಮಿಸಿ ಕುಫ್ರಿ ಕರಣ್ ಆಲೂಗೆಡ್ಡೆ ತಳಿಯ ಕುರಿತಾದ ಹೆಚ್ಚಿನ ತಾಂತ್ರಿಕ ಮಾಹಿತಿ ಪಡೆಯಲು ತಿಳಿಸಿದ್ದಾರೆ.

# ರೋಗಿ ಸಾವು: ಮೃತದೇಹ ಇಟ್ಟು ಪ್ರತಿಭಟನೆ

### ವೈದ್ಯರ ನಿರ್ಲಕ್ಷ್ಯ ಆರೋಪ: ಆಸ್ಪತ್ರೆ ಎದುರು ಪೊಲೀಸ್ ಬಂದೋಬಸ್ತ್

• ಪ್ರಜೋದಯ ವರದಿ





**ಹಾಸನ:** ನಗರದ ಆರ್.ಸಿ.ರಸ್ತೆಯಲ್ಲಿರುವ ಲಕ್ಷ್ಮಿ ಆಸ್ಪತ್ರೆಗೆ ವೈದ್ಯರ ನಿರ್ಲಕ್ಷ್ಯದಿಂದಲೇ ರೋಗಿ ಮೃತಪಟ್ಟಿದ್ದಾರೆ ಎಂದು ಆರೋಪಿಸಿ ರೋಗಿಯ ಸಂಬಂಧಿಕರು ಮೃತದೇಹ ಇಟ್ಟುಕೊಂಡು ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು. ತಾಲ್ಲೂಕಿನ ಅಗಿಲೆ ಗ್ರಾಮ ಆನಂದ್ (52) ಮೃತರು.

ಈ ವೇಳೆ ವೈದ್ಯರು ಹಾಗು ಸಂಬಂಧಿಕರ ನಡುವೆ ಮಾತಿನ ಚಕಮಕಿ ನಡೆದ ಹಿನ್ನಲೆ ಪರಿಸ್ಥಿತಿ ನಿಯಂತ್ರಿಸಲು ಹೆಚ್ಚಿನ ಸಂಖ್ಯೆಯ ಪೊಲೀಸ್ ಸಿಬ್ಬಂದಿಯನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು. ಆನಂದ್ ಅವರು ಎಡ ತೊಡೆಯ ಮೇಲ್ಭಾಗದಲ್ಲಿ ಊತ, ನೋವು ಹಾಗು ಗಡ್ಡೆಯ ರೀತಿಯ ಸಮಸ್ಯೆ ಕಾಣಿಸಿಕೊಂಡ ಹಿನ್ನಲೆ ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಈ ಹಿಂದೆ ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿದಾಗ ಕೆಲವು ದಿನ ಔಷಧ ಸೇವಿಸಿದ ಬಳಿಕ ಶಸ್ತ್ರಚಿಕಿತ್ಸೆ ನಡೆಸುವಂತೆ ಹಾಗು ರಕ್ತದಲ್ಲಿನ ಸಕ್ಕರೆ ಪ್ರಮಾಣ ನಿಯಂತ್ರಣಕ್ಕೆ ಬಂದ ನಂತರ ಮುಂದಿನ ಚಿಕಿತ್ಸೆ ಕೈಗೊಳ್ಳುವಂತೆ ವೈದ್ಯರು ಸಲಹೆ ನೀಡಿದ್ದರು ಎನ್ನಲಾಗಿದೆ.

ಆದರೆ, ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ನಡೆಸಿದ ಬಳಿಕ ಆರೋಗ್ಯದಲ್ಲಿ ಏರು- ಪೇರು ಉಂಟಾಯಿತು. ರಕ್ತದಲ್ಲಿನ ಸಕ್ಕರೆ ಪ್ರಮಾಣ ಹೆಚ್ಚಾಗಿದ್ದರೂ ಅಗತ್ಯ ವೈದ್ಯಕೀಯ ಪರೀಕ್ಷೆ ಹಾಗು ದೈಹಿಕ ಸಾಮರ್ಥ್ಯ ಪರಿಶೀಸದೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಶಸ್ತ್ರ ಚಿಕಿತ್ಸೆಯ ಬಳಿಕ ಆನಂದ್ ಅವರನ್ನು ಮನೆಗೆ ಕಳುಹಿಸಲಾಗಿತ್ತು. ಬಳಿಕ ಮತ್ತೆ ಕಾಲಿನಲ್ಲಿ ತೀವ್ರ ನೋವು ಕಾಣಿಸಿಕೊಂಡು ನಡೆಯಲು ಸಾಧ್ಯವಾಗದ ಸ್ಥಿತಿ ಉಂಟಾಗಿತ್ತು. ಅವರನ್ನು ಮತ್ತೆ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿದರೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಚಿಕಿತ್ಸೆಯಲ್ಲಿ ಲೋಪವಾಗಿರಬಹುದೆಂಬ ಅನುಮಾನವಿದೆ ಎಂದು ಸಂಬಂಧಿಕರು ಆರೋಪಿಸಿದ್ದಾರೆ.

**ವೈದ್ಯರ ಸ್ಪಷ್ಟನೆ:**

ಈ ಆರೋಪಗಳಿಗೆ ಪ್ರತಿಕ್ರಿಯಿಸಿರುವ ಆಸ್ಪತ್ರೆಯ ವೈದ್ಯರು, ಸೆ. 9ರಂದು ಆನಂದ್ ಅವರನ್ನು ಪರೀಕ್ಷಿಸಿದಾಗ ಎಡ ತೊಡೆಯ ಮೇಲ್ಭಾಗದಲ್ಲಿ ಕೀವು ಸಂಗ್ರಹವಾಗಿರುವುದು ಸ್ಕ್ಯಾನಿಂಗ್ ಹಾಗು ಇತರೆ ವೈದ್ಯಕೀಯ ಪರೀಕ್ಷೆಗಳಿಂದ ದೃಢಪಟ್ಟಿತ್ತು. ಕೀವು ಹೊರತೆಗೆಯಲು ಶಸ್ತ್ರ ಚಿಕಿತ್ಸೆ ಅಗತ್ಯವಿರುವುದನ್ನು ಕುಟುಂಬಸ್ಥರಿಗೆ ವಿವರಿಸಲಾಗಿತ್ತು.

ಸೆ.10ರಂದು ಸ್ಥಳೀಯ ಅರಿವಳಿಕೆ ನೀಡಿ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಸುಮಾರು 100 ಮಿಲಿ ಲೀಟರ್ ಕೀವು ಹೊರತೆಗೆದು ಪರೀಕ್ಷೆಗೆ ಕಳುಹಿಸಲಾಗಿತ್ತು ಎಂದು ವೈದ್ಯರು ಹೇಳಿದ್ದಾರೆ.

ಸೆ.13ರಂದು ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಸಂದರ್ಭದಲ್ಲಿ ರಕ್ತದಲ್ಲಿನ ಸಕ್ಕರೆ ಪ್ರಮಾಣ ಸಾಮಾನ್ಯವಾಗಿತ್ತು. ಸೆ.15ರಂದು ಮತ್ತೆ ಆಸ್ಪತ್ರೆಗೆ ಬಂದಾಗ ಗಾಯ ಗುಣಮುಖವಾಗುತ್ತಿದ್ದು, ಕೀವು ಕೂಡ ಕಡಿಮೆಯಾಗಿತ್ತು. ನಿಯಮಿತವಾಗಿ ಡ್ರೆಸ್ಸಿಂಗ್ ಮಾಡಿಸಿಕೊಂಡು ಓಡಾಡುವಂತೆ ಸಲಹೆ ನೀಡಲಾಗಿತ್ತು ಎಂದು ವೈದ್ಯರು ಸ್ಪಷ್ಟಪಡಿಸಿದ್ದಾರೆ.

### ವಿಶ್ವಕರ್ಮ ಸಮಾಜದ ಶ್ರೇಯೋಭಿವೃದ್ಧಿಗೆ ಪ್ರಾಮಾಣಿಕ ಸಹಕಾರ: ಶ್ರೇಯಸ್ ಪಟೇಲ್



• ಪ್ರಜೋದಯ ವರದಿ

**ಹಾಸನ:** ಪ್ರಪಂಚಕ್ಕೆ ಕಲೆ ಕೌಶಲ್ಯವನ್ನು ತಂದು ಕೊಟ್ಟಿರುವ ವಿಶ್ವಕರ್ಮರು ಹಾಕಿರುವಂತಹ ಮಾರ್ಗದಲ್ಲಿ ಸಮಾಜದ ಪ್ರತಿಯೊಬ್ಬರು ಸಾಗುವಂತಹ ಕೆಲಸ ಮಾಡಬೇಕೆಂದು ಸಂಸದ ಶ್ರೇಯಸ್ ಎಂ.ಪಟೇಲ್ ಅವರು ಹೇಳಿದರು.

ವಿಶ್ವಕರ್ಮ ಜಯಂತಿ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ವಿಶ್ವಕರ್ಮ ಸಮಾಜದ ಶ್ರೇಯೋಭಿವೃದ್ಧಿಗೆ ಪ್ರಾಮಾಣಿಕವಾಗಿ ಹೆಗಲು ಕೊಡುವ ಕೆಲಸ ಮಾಡಿದ್ದೇವೆ. ವಿಶ್ವಕರ್ಮ ಸಮಾಜದ ವಿವಿಧ ಬೇಡಿಕೆಗಳನ್ನು ಹಂತ ಹಂತವಾಗಿ ಬಗೆಹರಿಸುತ್ತೇವೆಂದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ವಿಶ್ವಕರ್ಮ ಸಮುದಾಯ ನಮ್ಮೆಲ್ಲರಿಗೂ ವಾಸ್ತುಶಿಲ್ಪಿಯಾಗಿ, ಮರ ಕೆಲಸ, ಇತರೆ ಕುಸುರಿ ಕೆಲಸ ಸೇರಿ ಪ್ರತಿಯೊಂದು ಕಸುಬುಗಳನ್ನು ವಿಶ್ವಕರ್ಮ ಸಮುದಾಯ ಕುಲ ಕಸುಬಾಗಿ ನಡೆಸಿಕೊಂಡು ಬರುತ್ತಿದೆ. ಪ್ರತಿನಿತ್ಯ ವಿಶ್ವಕರ್ಮ ಸಮುದಾಯದವರಿಂದ ದೇಶಕ್ಕೆ ಹಲವಾರು ಕೊಡುಗೆಗಳು ನೀಡುವಂತಹ ಕೆಲಸ ನಡೆಯುತ್ತಿದ್ದು, ವಿಶ್ವಕರ್ಮ ಸಮುದಾಯದವರು ರಾಜಕೀಯ ಕ್ಷೇತ್ರದಲ್ಲಿ ಹಾಗೂ ಉದ್ಯೋಗಗಳಿಗೆ ಸಂಬಂಧಪಟ್ಟಂತೆ ಉನ್ನತ ಮಟ್ಟದಲ್ಲಿ ಬೆಳೆಯಬೇಕೆಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ, ತಹಶೀಲ್ದಾರ್ ಗೀತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ|| ಹೆಚ್.ಪಿ. ತಾರಾನಾಥ್ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

### ಮುಖಂಡರು, ಬೂತ್ ಮಟ್ಟದ ಕಾರ್ಯಕರ್ತರೊಂದಿಗೆ ಪೂರ್ವಭಾವಿ ಸಭೆ

# ಕಸ್ತೂರಿರಂಗನ್ ವರದಿ ತೊಲಗಿಸಿ, ಮಲೆನಾಡು ಉಳಿಸಿ

• ಪ್ರಜೋದಯ ವರದಿ



**ಸಕಲೇಶಪುರ:** ಕಸ್ತೂರಿರಂಗನ್ ವರದಿಯ 7ನೇ ಕರಡು ಅಧಿಸೂಚನೆಯಿಂದ ಪೀಡಿತವಾಗಲಿರುವ ಮಲೆನಾಡಿನ ಜನರ ಅಹವಾಲು ಆಲಿಸುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೆ.20 ರಂದು ಸಕಲೇಶಪುರಕ್ಕೆ ಆಗಮಿಸಲಿದ್ದು, ಈ ಹಿನ್ನೆಲೆಯಲ್ಲಿ ಕಸ್ತೂರಿ ರಂಗನ್ ವರದಿ ತೊಲಗಿಸಿ, ಮಲೆನಾಡು ಉಳಿಸಿ ಬೃಹತ್ ಸಮಾವೇಶವನ್ನು ಯಶಸ್ವಿಗೊಳಿಸಲು ಕಾಂಗ್ರೆಸ್ ವತಿಯಿಂದ ಪೂರ್ವಭಾವಿ ಸಭೆ ನಡೆಸಿ ಸಿದ್ಧತೆ ಕೈಗೊಳ್ಳಲಾಯಿತು.

ಸಕಲೇಶಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಹಾಗೂ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಮುರುಳಿ ಮೋಹನ್ ನೇತೃತ್ವದಲ್ಲಿ ಆಲೂರಿನ ಗೃಹ ಕಚೇರಿ ಹಾಗೂ ಸಕಲೇಶಪುರದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಪ್ರತ್ಯೇಕ ಸಭೆ ನಡೆಯಿತು. ಆಲೂರು ತಾಲ್ಲೂಕು, ಕಟ್ಟಾಯ ಹೋಬಳಿ ಹಾಗೂ ಸಕಲೇಶಪುರ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಮುಖಂಡರು ಮತ್ತು ಬೂತ್ ಮಟ್ಟದ ಬಿಎಲ್‌ಒ 2 ಪದಾಧಿಕಾರಿಗಳೊಂದಿಗೆ ಸಮಾವೇಶದ ಸಿದ್ಧತೆ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಮುರುಳಿ ಮೋಹನ್, ಕಸ್ತೂರಿರಂಗನ್ ವರದಿಯ 7ನೇ ಕರಡು ಅಧಿ ಸೂಚನೆಯಲ್ಲಿ ಸಕಲೇಶಪುರ ತಾಲ್ಲೂಕಿನ 34 ಗ್ರಾಮಗಳು ಸೇರ್ಪಡೆಯಾಗಿರುವ ಹಿನ್ನೆಲೆಯಲ್ಲಿ ರೈತರು ಹಾಗೂ ಮಲೆನಾಡಿನ ಜನರಲ್ಲಿ ಆತಂಕ ಉಂಟಾಗಿದೆ. ವರದಿ ಜಾರಿಯಾಗಬಾರದು ಎಂಬುದು ಸ್ಥಳೀಯರ ನಿಲುವಾಗಿದೆ ಎಂದು ಹೇಳಿದರು.

ರಾಜ್ಯ ಸರ್ಕಾರವೂ ಕರಡು ಅಧಿಸೂಚನೆಗೆ ವಿರೋಧ ವ್ಯಕ್ತಪಡಿಸಿದ್ದು, ಈ ಕುರಿತು ಕೇಂದ್ರ ಸರ್ಕಾರಕ್ಕೆ ಆಕ್ಷೇಪ ಸಲ್ಲಿಸುವುದಾಗಿ ತಿಳಿಸಿದೆ. ಜನರ ಸಮಸ್ಯೆ ಹಾಗೂ ಆತಂಕಗಳನ್ನು ಖುದ್ದಾಗಿ ಆಲಿಸಲು ಮುಖ್ಯಮಂತ್ರಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಪಕ್ಷಾತೀತವಾಗಿ ಸಾರ್ವಜನಿಕರು, ರೈತರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಎಚ್. ಎಚ್.ಉದಯ್ ಮಾತನಾಡಿ, ವರದಿ ಜಾರಿಯಾದರೆ ಮಲೆನಾಡಿನ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಹಾಗೂ ಜನರ ಬದುಕಿನ ಮೇಲೆ ಪರಿಣಾಮ ಬೀರುವ ಆತಂಕವಿದೆ. ಈ ಹಿನ್ನೆಲೆಯಲ್ಲಿ ಪೀಡಿತ ಗ್ರಾಮಗಳ ಜನರು ಮುಖ್ಯಮಂತ್ರಿಗಳ ಮುಂದೆ ತಮ್ಮ ಅಹವಾಲುಗಳನ್ನು ಸಲ್ಲಿಸಿ, ವರದಿಯನ್ನು ತಿರಸ್ಕರಿಸುವಂತೆ ಮನವಿ ಮಾಡಬೇಕು ಎಂದರು.

ಸಭೆಯಲ್ಲಿ ಸಕಲೇಶಪುರ ತಾಲೂಕು ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸಯ್ಯದ್ ಮುಫೀಸ್, ಕಾಂಗ್ರೆಸ್ ಮುಖಂಡರು, ಆಲೂರು- ಕಟ್ಟಾಯ- ಸಕಲೇಶಪುರ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳು ಹಾಗೂ ಬೂತ್ ಮಟ್ಟದ ಬಿಎಲ್‌ಒ 2 ಕಾರ್ಯಕರ್ತರು ಉಪಸ್ಥಿತರಿದ್ದರು.

### ಇಂದು ವಾಟೆಹೊಳೆ ನೀರು ಬಿಡುಗಡೆ

• ಪ್ರಜೋದಯ ವರದಿ



**ಆಲೂರು:** ವಾಟೆಹೊಳೆ ಜಲಾಶಯ ದಿಂದ ಸೆ.18 ರಂದು ನೀರು ಬಿಡುಗಡೆ ಮಾಡಲು ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಆದೇಶ ನೀಡಿದ್ದಾರೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದ್ದಾರೆ.

ಸಕಲೇಶಪುರ ಎತ್ತಿನಹೊಳೆ ಯೋಜನೆ ವೀಕ್ಷಣೆ ಮಾಡಲು ಆಗಮಿಸಿದ್ದ ಸಚಿವರಿಗೆ ಶಾಸಕ ಸಿಮೆಂಟ್ ಮಂಜು ಅವರು, 1.5 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ವುಳ್ಳ ವಾಟೆಹೊಳೆ ಜಲಾಶಯ ಇರುವುದು ಆಲೂರು ತಾಲ್ಲೂಕು ರೈತರ ನೆರವಿಗಾಗಿ. ಸದ್ಯ ಶೇ. 65 ರಷ್ಟು ನೀರು ಜಲಾಶಯದಲ್ಲಿದೆ. 18 ಸಾವಿರ ಎಕರೆ ಪ್ರದೇಶಕ್ಕೆ ಹರಿಯ ಬೇಕಾಗಿದ್ದ ನೀರು ಕೇವಲ 5 ಸಾವಿರ ಎಕರೆಗೆ ಮಾತ್ರ ನೀರು ಹರಿಸಲಾಗು ತ್ತಿದೆ ಎಂದು ಹೇಳಿದರು.

ಇತ್ತೀಚೆಗೆ ನಡೆದ ಕಾವೇರಿ ನೀರಾವರಿ ಸಮಿತಿ ಮತ್ತು ಕೆಡಿಪಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಮಾಡಿದ್ದೇನೆ. ಹೇಮಾವತಿ ಜಲಾಶಯಕ್ಕೆ ಸಂಬಂಧಿಸಿದಂತೆ ನಮ್ಮ ಕ್ಷೇತ್ರದಲ್ಲಿ ಅತಿ ಹೆಚ್ಚು 35 ಸಾವಿರ ಎಕರೆ ಭೂಮಿಯನ್ನು ರೈತರು ಕಳೆದುಕೊಂಡಿದ್ದಾರೆ. ಮುಳುಗಡೆ ಸಂತ್ರಸ್ತರು ಆಲೂರು ತಾಲ್ಲೂಕಿನಲ್ಲಿ ನೆಲೆಸಿದ್ದಾರೆ. ಜಲಾಶಯದಲ್ಲಿ ನೀರು ಇಟ್ಟುಕೊಂಡು ಸಕಾಲಕ್ಕೆ ಬಳಸಿಕೊಳ್ಳಲು ಆಗದಿದ್ದರೆ ನಮಗೆ ನೀರು ಏಕೆ ಬೇಕು. ಕೂಡಲೇ ಬಿಡುಗಡೆಗೆ ಆದೇಶ ನೀಡಬೇಕು ಎಂದು ಸಚಿವರ ಗಮನ ಸೆಳೆದರು.

ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿದ ನಂತರ ನೀರು ಬಿಡುಗಡೆ ಮಾಡಲು ಸೂಚಿಸಿದ್ದಾರೆ ಎಂದು ಶಾಸಕರು ತಿಳಿಸಿದರು.

### ದೀಕ್ಷಾ ಭೂಮಿ ಯಾತ್ರೆಗೆ ಪ್ರಯಾಣಿಸಲು ಅರ್ಜಿ ಆಹ್ವಾನ

**ಹಾಸನ:** ಡಾ||ಬಿ.ಆರ್.ಅಂಬೇಡ್ಕರ್ ರವರ ಅನುಯಾಯಿಗಳು ಮಹಾರಾಷ್ಟ್ರ ನಾಗಪುರದಲ್ಲಿನ ದೀಕ್ಷಾ ಭೂಮಿ ಯಾತ್ರೆಗೆ ಅ.19 ರಿಂದ ಅ.22ರ ವರೆಗೆ ವಿವಿಧ ಜಿಲ್ಲೆಗಳಿಂದ ಪ್ರಯಾಣಿಸಿ ಹಾಗೂ ಹಿಂದಿರುಗಿ ಬರುವ ಸಂಬಂಧ ಬಸ್ಸು ಮತ್ತು ರೈಲಿನ ಮೂಲಕ ವ್ಯವಸ್ಥೆ ಕಲ್ಪಿಸಲಾಗುತ್ತಿದ್ದು, ಅರ್ಹ ಯಾತ್ರಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ ಲಿಂಕ್ https://swd.karnataka.gov.in/ website ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸೆ.19 ರಿಂದ ಸಲ್ಲಿಸಬಹುದಾಗಿದೆ.

ಅ.9 ರವರೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ, ನಂತರ ದಾಖಲಾತಿಗಳನ್ನು ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್. ಅಂಬೇಡ್ಕರ್ ಭವನ ಇಲ್ಲಿಗೆ ನೀಡುವುದಾಗಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕುರಿ, ಮೇಕೆ, ಕೋಳಿ ಸಾಕಾಣಿಕೆ ತರಬೇತಿ



• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ರೈತರಿಗೆ, ರೈತ ಮಹಿಳೆಯರಿಗೆ ಹಾಗೂ ಆಸಕ್ತಿಯುಳ್ಳ ಎಲ್ಲರಿಗೂ ಪಶು ಪಾಲನಾ ಇಲಾಖೆಯ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರ, ಹಾಸನ ವತಿಯಿಂದ ತರಬೇತಿಯನ್ನು ಏರ್ಪಡಿಸಲಾಗಿದೆ ಎಂದು ಪಶು ಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರ ಉಪ ನಿರ್ದೇಶಕರು ತಿಳಿಸಿದ್ದಾರೆ.

ಸೆ.21 ಹಾಗೂ 22 ರಂದು ರೈತರಿಗೆ ಆಧುನಿಕ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ, ಸೆ.23 ಹಾಗೂ 24 ರಂದು ರೈತರಿಗೆ ಆಧುನಿಕ ಕೋಳಿ ಸಾಕಾಣಿಕೆ ತರಬೇತಿ ಆಯೋಜಿಸಲಾಗಿದ್ದು ತರಬೇತಿಯಲ್ಲಿ ಭಾಗವಹಿಸುವ ಶಿಭಿರಾರ್ಥಿಗಳಿಗೆ ಯಾವುದೇ ಪ್ರಯಾಣ ಭತ್ಯೆ ಅಥವಾ ಸ್ಟೈಫಂಡ್ ನೀಡಲಾಗುವುದಿಲ್ಲ,

ಆಸಕ್ತಿಯುಳ್ಳವರು ಆಧಾರ್ ಕಾರ್ಡ್, ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿದವರು ಜಾತಿ ಪ್ರಮಾಣ ಪತ್ರ ಜೆರಾಕ್ಸ್ ಪ್ರತಿ ಹಾಗೂ ಎರಡು ಭಾವಚಿತ್ರದೊಂದಿಗೆ ತರಬೇತಿ ಪ್ರಾರಂಭವಾಗುವ ದಿನಾಂಕದಂದು ಬೆಳಿಗ್ಗೆ 10.30 ಗಂಟೆಯೊಳಗೆ ಉಪ ನಿರ್ದೇಶಕರ ಕಚೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ, ಬಿ.ಎಂ.ರಸ್ತೆ ಸಂತೇಪೇಟೆ, ಹಾಸನದಲ್ಲಿ ಹಾಜರಾಗಬೇಕೆಂದು ತಿಳಿಸಿದ್ದಾರೆ.

ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08172-235226 ಅನ್ನು ಸಂಪರ್ಕಿಸಬಹುದಾಗಿದೆ.

# ವಿಶ್ವಕರ್ಮರ ಕೊಡುಗೆ ಅವಿಸ್ಮರಣೀಯ

### ದೇಶಕ್ಕೆ - ನಾಡಿಗೆ ವಿಶ್ವಕರ್ಮರು ನೀಡಿರುವ ಕೊಡುಗೆ ಅವಲೋಕಿಸಿ ಪ್ರಜ್ಞಾವಂತರಾಗಬೇಕು

• ಪ್ರಜೋದಯ ವರದಿ




**ಆಲೂರು:** ಪ್ರಪಂಚಕ್ಕೆ ವಿಶ್ವಕರ್ಮರ ಕೊಡುಗೆ ಅವಿಸ್ಮರಣೀಯವಾಗಿದೆ ಎಂದು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಅಧ್ಯಕ್ಷರು ಹಾಗೂ ತಹಸೀಲ್ದಾರ್ ಹೆಚ್.ಮಲ್ಲಿಕಾರ್ಜುನ್ ಅವರು ತಿಳಿಸಿದರು

ಪಟ್ಟಣದ ಮಿನಿ ವಿದಾನಸೌಧ ಸಭಾಂಗಣದಲ್ಲಿ ತಾಲ್ಲೂಕು ಆಡಳಿತ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ, ತಾಲ್ಲೂಕು ವಿಶ್ವಕರ್ಮ ಸಮಾಜ, ಶ್ರೀ ವಿರಾಟ್ ವಿಶ್ವಕರ್ಮ ಯುವಕ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಶ್ರೀ ಭಗವಾನ್ ವಿಶ್ವಕರ್ಮ ಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು, ವಿಶ್ವಕರ್ಮರು ದೇಶಕ್ಕೆ ಹಾಗೂ ನಾಡಿಗೆ ನೀಡಿರುವ ಕೊಡುಗೆಗಳನ್ನು ಅವಲೋಕಿಸಿ ಪ್ರಜ್ಞಾವಂತರಾಗಬೇಕು. ಇವರು ನಿರ್ಮಾಣ ಮಾಡಿದ ಬೇಲೂರು, ಹಳೇಬೀಡು, ಶ್ರವಣಬೆಳಗೊಳದಂತಹ ಸಹಸ್ರಾರು ಧಾರ್ಮಿಕ ಕೇಂದ್ರಗಳ ಪೈಕಿ ಕೆಲವು ಯುನೆಸ್ಕೊ ಪಟ್ಟಿಗೆ ಸೇರಿದ್ದು ಇವರ ಶಿಲ್ಪಕಲೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದರು

ಹಾಸನ ಜಿಲ್ಲೆ ವಿಶ್ವಕರ್ಮ ಸಮಾಜದ ಮಾಜಿ ಅಧ್ಯಕ್ಷ ಬಿ.ಸಿ. ಶಂಕರಾಚಾರ್ ಅವರು ಮಾತನಾಡಿ, ಇಡೀ ವಿಶ್ವದ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ದೇವಲೋಕ, ಯಮಲೋಕ, ಮತ್ತು ಅನೇಕ ದೇವತೆಗಳ ಅರಮನೆಗಳನ್ನು ನಿರ್ಮಿಸಿದ ಇತಿಹಾಸವಿದೆ. ರೈತರು ಈ ದೇಶದ ಬೆನ್ನೆಲುವಾದರೆ, ರೈತರ ಬೆನ್ನೆಲುಬು ವಿಶ್ವಕರ್ಮ ಎಂದರೆ ತಪ್ಪಾಗಲಾರದು. ರೈತರು ಭೂಮಿಯನ್ನು ಹಸನುಗೊಳಿಸುವ ನೇಗಿಲುಗಳು, ಕುಂಟೆ, ಕೂರಿಗೆಗಳಂತಹ ಕೃಷಿ ಸಲಕರಣೆಗಳನ್ನು ತಯಾರಿಸಿ ಕೊಡುತ್ತಿದ್ದರು. ಹುಟ್ಟಿದ ಮಕ್ಕಳಿಗೆ ನಾಭಿಯನ್ನ ಕತ್ತರಿಸುವ ಹಾಗೂ ಮಕ್ಕಳಿಗೆ ಕಿವಿಯನ್ನು ಚುಚ್ಚುವ ಎಲ್ಲಾ ಸಲಕರಣೆಗಳನ್ನು ವಿಶ್ವಕರ್ಮರು ಮಾಡಿಕೊಡುತ್ತಿದ್ದರು ಎಂದರು. ಆದರೆ ರಾಜಕೀಯವಾಗಿ ಯಾವುದೇ ಪ್ರಾಧಾನ್ಯತೆ ದೊರೆಯದೆ ಇರುವುದು ವಿಷಾದನೀಯ ಎಂದರು.

ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಎಂ.ಪಿ ಹರೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೌಸರ್ ಅಹಮದ್, ಅಕ್ಷರ ದಾಸೋಹ ಸಹಾ ಯಕ ನಿರ್ದೇಶಕ ಸಿದ್ದೇಶ್ ಕುಮಾರ್, ಉಪ ತಹಸೀಲ್ದಾರ್ ಅಂಕೇಗೌಡ, ಶಾಂತ ಕೃಷ್ಣ, ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಎಂ.ಪಿ.ಹರೀಶ್, ಶ್ರೀ ವಿರಾಟ್ ವಿಶ್ವಕರ್ಮ ಯುವಕ ಸಂಘದ ಅಧ್ಯಕ್ಷ ವೀರಭದ್ರಸ್ವಾಮಿ, ಗೌರವಾಧ್ಯಕ್ಷ ಬಿ.ವೈ.ಮಧು ಕುಮಾರ್, ಉಪಾಧ್ಯಕ್ಷ ಎಂ.ಡಿ. ಪ್ರದೀಪ್, ಪ್ರಧಾನ ಕಾರ್ಯದರ್ಶಿ ವಿಶ್ವನಾಥ್, ಖಜಾಂಚಿ ಮಿಥುನ್, ಸಹ ಕಾರ್ಯದರ್ಶಿ ಪವನ್‌ಕುಮಾರ್ ನಿರ್ದೇಶಕರಾದ ಜಿತೇಂದ್ರ, ಪರಮೇಶ್, ದುರ್ಗಾಪ್ರಸಾದ್, ಹೇಮಂತ್, ರವಿಕುಮಾರ್, ಕೋಮ ರಾಜ್, ಸಮಾಜದ ಬಾಂಧವರು ಹಾಗೂ ತಾಲ್ಲೂಕು ಕಚೇರಿಯ ಸಿಬ್ಬಂದಿಗಳಾದ ಶಿವಪ್ರಸಾದ್, ಪನಗ ಭೂಷಣ್, ಸ್ಫೂರ್ತಿಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು.

### ಮುಸ್ಲಿಂ ಮುಖಂಡರಿಂದ ಗಣಪತಿ ಸೇವಾ ಸಮಿತಿಯವರಿಗೆ ಸನ್ಮಾನ

# ಸೌಹಾರ್ದತೆಯ ಸಂದೇಶ ಹೊತ್ತು ಭಾವೈಕ್ಯತೆ ಸಾರಿದರು...!

• ಪ್ರಜೋದಯ ವರದಿ



**ಸಕಲೇಶಪುರ:** ಸೌಹಾರ್ದತೆ ಹಾಗೂ ಶಾಂತಿಗೆ ಹೆಸರಾಗಿರುವ ಪಟ್ಟಣದಲ್ಲಿ ಮುಸ್ಲಿಂ ಸಮುದಾಯದ ಮುಖಂಡರು ಗಣಪತಿ ಸೇವಾ ಸಮಿತಿಯ ಕಾರ್ಯಕ್ರಮಕ್ಕೆ ಸೌಹಾರ್ದ ಭೇಟಿ ನೀಡಿ, ಸಮಿತಿಯ ಪ್ರಮುಖರನ್ನು ಹಾರ-ಶಾಲು ಹಾಕಿ ಗೌರವ ಪೂರ್ವಕವಾಗಿ ಅಭಿನಂದಿಸಿದರು.

ಪಟ್ಟಣದ ಪುರಭವನದಲ್ಲಿ ಗೌರಿ ಗಣೇಶ ಹಬ್ಬದ ಪ್ರಯುಕ್ತ ಗಣಪತಿ ಸೇವಾ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಗಣೇಶೋತ್ಸವ ಕಾರ್ಯಕ್ರಮಕ್ಕೆ ಭೇಟಿ ನೀಡಿದ ಮುಸ್ಲಿಂ ಬಾಂಧವರು, ಹಬ್ಬದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಸಮಿತಿಯ ಪದಾಧಿಕಾರಿಗಳನ್ನು ಆತ್ಮೀಯವಾಗಿ ಸನ್ಮಾನಿಸಿ ಪ್ರೀತಿ-ವಿಶ್ವಾಸ ವ್ಯಕ್ತಪಡಿಸಿದರು. ಪ್ರತಿಯಾಗಿ ಗಣಪತಿ ಸೇವಾ ಸಮಿತಿಯವರು ಮುಸ್ಲಿಂ ಮುಖಂಡರಿಗೆ ಪ್ರಸಾದ ನೀಡಿ, ಗೌರವದ ಆತಿಥ್ಯ ನೀಡಿದರು.

ಸೌಹಾರ್ದತೆ ಹಾಗೂ ಶಾಂತಿಗೆ ಹೆಸರಾಗಿರುವ ಸಕಲೇಶಪುರದಲ್ಲಿ ವಿವಿಧ ಧರ್ಮಗಳ ಜನರು ಪರಸ್ಪರರ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸೌಹಾರ್ದತೆಯ ಸಂದೇಶ ಸಾರಿದರು.

ಈ ವೇಳೆ ಮಾತನಾಡಿದ ಸಯ್ಯದ್ ಮುಫೀಸ್, ಸಕಲೇಶಪುರದಲ್ಲಿ ನಡೆಯುವ ರಥೋತ್ಸವ, ಗಣಪತಿ ಸೇರಿದಂತೆ ವಿವಿಧ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಜಾತಿ, ಧರ್ಮದ ಭೇದವಿಲ್ಲದೆ ಎಲ್ಲರೂ ಪಾಲ್ಗೊಳ್ಳುತ್ತಿರುವುದು ಸೌಹಾರ್ದತೆಯ ಪ್ರತೀಕವಾಗಿದೆ ಎಂದು ಮೆಚ್ಚುಗೆ ಸೂಚಿಸಿದರು.

ಸಕಲೇಶಪುರದ ಸೌಹಾರ್ದತೆಯನ್ನು ಉಳಿಸಿ ಬೆಳೆಸುವಲ್ಲಿ ಗಣಪತಿ ಸೇವಾ ಸಮಿತಿಯವರು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಇಂತಹ ಕಾರ್ಯಕ್ರಮಗಳು ಮುಂದುವರಿಯಬೇಕು. ಸೌಹಾರ್ದತೆಯ ಈ ಪರಂಪರೆಯನ್ನು ಮುಂದಿನ ಪೀಳಿಗೆಗೂ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡ ಮುಸ್ಲಿಂ ಸಮುದಾಯದವರು ಗಣಪತಿ ಸೇವಾ ಸಮಿತಿಯ ಆತಿಥ್ಯ ಸ್ವೀಕರಿಸಿದರು. ಇದೇ ವೇಳೆ ನಾಡಿನ ಸೌಹಾರ್ದತೆಯನ್ನು ಉಳಿಸಿ ಬೆಳೆಸುವಲ್ಲಿ ಶ್ರಮಿಸುತ್ತಿರುವ ಗಣಪತಿ ಸೇವಾ ಸಮಿತಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ಗಣಪತಿ ಸೇವಾ ಸಮಿತಿ ಅಧ್ಯಕ್ಷ ಎಸ್.ಡಿ. ಸತೀಶ, ರವಿಕುಮಾರ್ ಆನೆಮಹಲ್, ಹಸ್ಸೈನಾರ್ ಸೇರಿದಂತೆ ಸಮಿತಿಯ ಸದಸ್ಯರು ಹಾಗೂ ವಿವಿಧ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

### ಐತಿಹಾಸಿಕ ಶತಕ ಸಿಡಿಸಿದ ಅಭಿಷೇಕ್ ಶರ್ಮಾ

ದೆಹಲಿ: ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಅಫ್ಘಾನಿಸ್ತಾನ ವಿರುದ್ಧದ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಟೀಂ ಇಂಡಿಯಾದ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಐತಿಹಾಸಿಕ ಇನ್ನಿಂಗ್ಸ್ ಆಡಿದ್ದಾರೆ. ಅಫ್ಘಾನಿಸ್ತಾನ ವಿರುದ್ಧದ ಈ ಪಂದ್ಯದಲ್ಲಿ ಕೇವಲ 30 ಎಸೆತಗಳಲ್ಲಿ ಶತಕ ಬಾರಿಸಿದ ಅಭಿಷೇಕ್ ಇದರೊಂದಿಗೆ ಅಂತರ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ವೇಗದ ಶತಕ ಬಾರಿಸಿದ ಪೂರ್ಣ ಸದಸ್ಯತ್ವ ಪಡೆದಿರುವ ದೇಶಗಳ ಆಟಗಾರರ ಪಟ್ಟಿಯಲ್ಲಿ ದಕ್ಷಿಣ ಆಫ್ರಿಕಾದ ಮಾಜಿ ಆಟಗಾರ ಎಬಿ ಡಿವಿಲಿಯರ್ಸ್ ಅವರ ದಾಖಲೆ ಯನ್ನು ಮುರಿದಿದ್ದಾರೆ.

34 ಎಸೆತಗಳಲ್ಲಿ 108 ರನ್

ಆರಂಭದಿಂದಲೂ ಅಫ್ಘಾನಿಸ್ತಾನ್ ಬೌಲರ್‌ಗಳನ್ನು ಬೆಂಡೆತ್ತಿದ ಅಭಿಷೇಕ್ ಶರ್ಮಾ ಪವರ್‌ಪ್ಲೇನಲ್ಲಿಯೇ ಐದು ಸಿಕ್ಸರ್ ಮತ್ತು ಐದು ಬೌಂಡರಿಗಳ ಸಹಿತ ಕೇವಲ 16 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅರ್ಧಶತಕ ತಲುಪಿದ ನಂತರ ಇನ್ನಷ್ಟು ಅಪಾಯಕಾರಿಯಾದ ಅಭಿಷೇಕ್ ಮುಂದಿನ 14 ಎಸೆತಗಳಲ್ಲಿ ಉಳಿದ 50 ರನ್‌ಗಳನ್ನು ಕಲೆ ಹಾಕಿ ತಮ್ಮ ಶತಕವನ್ನು ಪೂರೈಸಿದರು.

### ವಿವಿಧ ಆಕೃತಿಯ ಪರಿಸರ ಸ್ನೇಹಿ ಗಣೇಶನ ದರ್ಶನ

• ಪ್ರಜೋದಯ ವರದಿ




**ಹಾಸನ:** ನಗರದ ಎಸ್. ಆರ್.ಎಸ್. ಪ್ರಜ್ಞಾ ವಿದ್ಯಾಶಾಲೆಯಲ್ಲಿ ಗಣೇಶ ಚತುರ್ಥಿಯನ್ನು ವಿನೂತನವಾಗಿ ಆಚರಿಸಲಾಯಿತು.

ಶಾಲೆಯ ನರ್ಸರಿಯಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳು ವಿವಿಧ ಆಕೃತಿಯ ಪರಿಸರ ಸ್ನೇಹಿ ಗಣೇಶನ ಮೂರ್ತಿಗಳನ್ನು ವೈವಿಧ್ಯಮಯ ವಸ್ತುಗಳಾದ ಜೇಡಿಮಣ್ಣು, ವಿವಿಧ ಬಗೆಯ ಕಾಳುಗಳು, ಧಾನ್ಯಗಳು, ವಿವಿಧ ಸಸ್ಯ ಮತ್ತು ಮರಗಳ ಎಲೆಗಳು, ಅನುಪಯುಕ್ತ ಕಾಗದಗಳು, ಕೊಬ್ಬರಿ, ವಿವಿಧ ತರಕಾರಿ ಹಾಗೂ ಹಣ್ಣುಗಳ ಸಿಪ್ಪೆಗಳು ಮತ್ತು ಇತರೆ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಿ ಸುಮಾರು 900ಕ್ಕೂ ಹೆಚ್ಚು ವಿವಿಧ ಮಾದರಿಯ ಗಣೇಶನ ಮೂರ್ತಿಗಳನ್ನು ತಮ್ಮಲ್ಲಿರುವ ಕೌಶಲ್ಯದ ಮೂಲಕ ಶಿಕ್ಷಕರ ಮಾರ್ಗದರ್ಶನ ಹಾಗೂ ಪೋಷಕರ ಸಹಕಾರದೊಂದಿಗೆ ಸೃಜನಾತ್ಮಕವಾಗಿ ತಯಾರಿಸಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದರು.

ಈ ರೀತಿ ತಯಾರು ಮಾಡಿದ ಗಣೇಶನ ಮೂರ್ತಿಗಳನ್ನು ಶಾಲಾ ಸಭಾಂಗಣದಲ್ಲಿ ಅಲಂಕಾರಿಕವಾಗಿ ಪ್ರತಿಷ್ಠಾಪಿಸಿ, ಪೂಜೆ ನೆರವೇರಿಸಿ ವಿದ್ಯಾರ್ಥಿಗಳಿಗೆ ವೀಕ್ಷಿಸಲು ಅವಕಾಶ ಮಾಡಿಕೊಡಲಾಯಿತು. ಶಾಲೆಯ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕ ವೃಂದದವರು ಹಾಗೂ ಪೋಷಕರು ಕುತೂಹಲದಿಂದ ವೀಕ್ಷಿಸಿ ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ಪ್ರದರ್ಶನವನ್ನು ಅರ್ಥಪೂರ್ಣಗೊಳಿಸಿದರು.

ಇದು ವಿದ್ಯಾರ್ಥಿಗಳ ಪ್ರತಿಭಾ ಕೌಶಲ್ಯವನ್ನು ಗುರುತಿಸಿ ಪ್ರೋತ್ಸಾಹಿಸಲು ಒಂದು ಉತ್ತಮ ವೇದಿಕೆಯಾಯಿತು.

ಅತ್ಯುತ್ತಮವಾದ ಗಣೇಶ ಮೂರ್ತಿಗಳನ್ನು ಗುರುತಿಸಿ ಬಹುಮಾನಗಳಿಗೂ ಆಯ್ಕೆ ಮಾಡಲಾಯಿತು. ವಿದ್ಯಾರ್ಥಿಗಳು ತಾವೇ ಸ್ವತಃ ಪರಿಸರ ಸ್ನೇಹಿ ಗಣೇಶನ ಮೂರ್ತಿಗಳನ್ನು ತಯಾರಿಸುವ ಮೂಲಕ ತಾವು ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ಇತರರಲ್ಲಿಯೂ ಸಹ ಪರಿಸರ ಸಂರಕ್ಷಣೆಯ ಅರಿವು ಮೂಡಿಸಿದರು.

